ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್–585226

ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, (ದ.ಕ.)




# ಕೃಷಿ ಸಂಜೀವಿನಿ




ದೂರವಾಣಿ ಸಂಖ್ಯೆ: 0824: 2431872, 8762543060

e-mail: kvk.DakshinaKannada@icar.gov.in, kvkdk@rediffmail.com, kvkdkmlr@gmail.com, Web: kvkdk.org



ಸಂಚಿಕೆ: 01 ಅಕ್ಟೋಬರ್– ಡಿಸೆಂಬರ್ 2022 ಇ–ವಾರ್ತಾ ಪತ್ರಿಕೆ ಸಂಪುಟ–3


## ದೇಸಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ

ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ ಮಂಗಳೂರು, ಸಮೇತಿ (ದಕ್ಷಿಣ), ಜಿ.ಕೆ.ವಿ.ಕೆ ಬೆಂಗಳೂರು, ಮ್ಯಾನೇಜ್, ಹೈದ್ರಾಬಾದ್ ಹಾಗೂ ಕೃಷಿ ಇಲಾಖೆ ದಕ್ಷಿಣ ಕನ್ನಡ ಇವರುಗಳ ಪ್ರಾಯೋಜಿತ ಕಾರ್ಯಕ್ರಮದಡಿಯಲ್ಲಿ ದೇಸಿ ವಿದ್ಯಾರ್ಥಿಗಳಿಗೆ ತೋಟಗಾರಿಕೆ ಕ್ಷೇತ್ರ ತುಂಬೆಗೆ ಶೈಕ್ಷಣಿಕ ಪ್ರವಾಸವನ್ನು ದಿನಾಂಕ 08.10.2022 ರಂದು ಹಮ್ಮಿಕೊಳ್ಳಲಾಗಿತ್ತು. ಶ್ರೀ. ಹರೀಶ್ ಕುಲಾಲ್, ಸಹಾಯಕ ತೋಟಗಾರಿಕೆ ಅಧಿಕಾರಿಯವರು ತೆಂಗಿನಲ್ಲಿ ಕಪ್ಪು ತಲೆ ಹುಳುವಿನ ಪರಾವಲಂಬಿ ಜೀವಿಯಾದ ಗೋನಿಯೋಜಸ್ ನೆಫಾಂಟಿಡಿಸ್‌ನ್ ಜೀವನ ಚಕ್ರ ಮತ್ತು ಅಭಿವೃದ್ಧಿಯ ಹಾಗೂ ಅಡಿಕೆ, ತೆಂಗು, ಸೀಬೆ, ಕೋಕೋ ಮತ್ತು ಕಾಳು ಮೆಣಸಿನಲ್ಲಿ ಸಮಗ್ರ ನಿರ್ವಹಣೆ ಮತ್ತು ಸಸ್ಯಾಭಿವೃದ್ಧಿ ಬಗ್ಗೆ ಮಾಹಿತಿಯನ್ನು ನೀಡಿದರು. ಡಾ. ಕೇದಾರನಾಥ, (ಸಸ್ಯ ಸಂರಕ್ಷಣೆ) ರವರು ಅಡಿಕೆ, ತೆಂಗು, ಸೀಬೆ, ಕೋಕೋ ಮತ್ತು ಕಾಳು ಮೆಣಸಿನಲ್ಲಿ ಕಂಡು ಬರುವ ಕೀಟ ಮತ್ತು ರೋಗಗಳ ನಿರ್ವಹಣೆ ಕುರಿತು ಮಾಹಿತಿಯನ್ನು ನೀಡಿದರು. ಒಟ್ಟು 36 ದೇಸಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.





## ಕೃಷಿ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಇಂಟರ್ನ್‌ಷಿಪ್ ಕಾರ್ಯಕ್ರಮ:

ಭಾರತೀಯ ಕೃಷಿ ಅನುಸಂಧಾನ ಪರಿಷತ್ ಕೃಷಿ ವಿಜ್ಞಾನ ಕೇಂದ್ರ ಮಂಗಳೂರು ಇವರ ವತಿಯಿಂದ ಮೋಹನ್ ಆಳ್ವ ಇಂಜಿನಿಯರಿಂಗ್ ಕಾಲೇಜಿನ ಕೃಷಿ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ದಿನಾಂಕ 11.10.2022 ರಿಂದ 22.10.2022ರವರೆಗೆ ಇಂಟರ್ನ್‌ಷಿಪ್ ಕಾರ್ಯಕ್ರಮವನ್ನು ಆಯೋಜಿಸಲಾಯಿತು. 48 ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು 12 ದಿವಸಗಳ ಇಂಟರ್ನ್‌ಷಿಪ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಕೃಷಿ ಮತ್ತು ಕೃಷಿ ಸಂಬಂಧಿತ ವಿಷಯಗಳಾದ ಪಶು ಸಂಗೋಪನೆ, ತೋಟಗಾರಿಕೆ ಮತ್ತು ಮೀನುಗಾರಿಕೆ ವಿಷಯಗಳಲ್ಲಿ ತರಬೇತಿಯನ್ನು ನೀಡುವುದರ ಜೊತೆಗೆ ಕೃಷಿ ವಿಜ್ಞಾನ ಕೇಂದ್ರದಲ್ಲಿ ಜರುಗುವ ದಿನ ನಿತ್ಯದ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾಯಿತು. ಡಾ. ಶಿವಕುಮಾರ್, ಆರ್., ಸಹಾಯಕ ಪ್ರಾಧ್ಯಾಪಕರು, ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು ಇವರು ಕಾರ್ಯಕ್ರಮದ ಸಂಯೋಜಕರಾಗಿದ್ದು, ಸದರಿ ತರಬೇತಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ವಿಜ್ಞಾನಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.












## ಮಣ್ಣು ಪರೀಕ್ಷಾ ಕಿಟ್‌ನ ಬಳಕೆ ಮತ್ತು ಅನುಸ್ಥಾಪನೆಯ ಕುರಿತು ಪ್ರಾಯೋಗಿಕ ತರಬೇತಿ

ಭಾ.ಕೃ.ಅ.ಪ. ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ, ದಕ್ಷಿಣ ಕನ್ನಡ ಜಿಲ್ಲೆ ತೆಂಗು ರೈತ ಉತ್ಪಾದಕರ ಕಂಪೆನಿ ನಿಯಮಿತ, ವಿಟ್ಲದ ಸಿಬ್ಬಂದಿಗಳಾದ ಮಿಲಿಶಾ ಜಿ ನಾಯಕ್ ಮತ್ತು ಜಯಪ್ರದಾ. ಎನ್ ಪಿ. ಇವರಿಗೆ ದಿನಾಂಕ 11.10.2022 ರಿಂದ 05.11.2022 ರ ವರೆಗೆ ಸುಮಾರು 25 ದಿನಗಳ ಮಣ್ಣು ಪರೀಕ್ಷಾ ಕಿಟ್‌ನ ಬಳಕೆ ಮತ್ತು ಅನುಸ್ಥಾಪನೆಯ ಬಗ್ಗೆ ಕೆವಿಕೆಯ ಮಣ್ಣು ಮತ್ತು ನೀರು ಪರೀಕ್ಷಾ ಕೇಂದ್ರದಲ್ಲಿ ಪ್ರಾಯೋಗಿಕ ತರಬೇತಿ ನೀಡಲಾಯಿತು. ಗ್ರಾಮ ಮಟ್ಟದಲ್ಲಿ ಮಣ್ಣು ಪರೀಕ್ಷಾ ಸೌಲಭ್ಯವನ್ನು ಕಲ್ಪಿಸಿ ಸರಿಯಾದ ಪ್ರಮಾಣದ ಸಾವಯವ ಹಾಗೂ ರಸಗೊಬ್ಬರದ ಬಳಕೆಗೆ ಶಿಫಾರಸ್ಸು ನೀಡಿ, ರಸಗೊಬ್ಬರದ ಬಳಕೆಯ ದಕ್ಷತೆ ಹೆಚ್ಚಿಸುವುದರೊಂದಿಗೆ ಬೆಳೆ ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ದಕ್ಷಿಣ ಕನ್ನಡ ಜಿಲ್ಲೆ ತೆಂಗು ರೈತ ಉತ್ಪಾದಕರ ಕಂಪೆನಿಯ ಹೊಸ ಮಣ್ಣು ಪರೀಕ್ಷಾ ಕೇಂದ್ರ ಸ್ಥಾಪಿಸಲು ಈ ಪ್ರಾಯೋಗಿಕ ತರಬೇತಿ ಕಲ್ಪಿಸಲಾಯಿತು. ಕೃಷಿವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿಯಾದ ಡಾ.ಮಲ್ಲಿಕಾರ್ಜುನ.ಎಲ್.ತಾಂತ್ರಿಕ ಮಾಹಿತಿಯೊಂದಿಗೆ ಪ್ರಾಯೋಗಿಕ ತರಬೇತಿನೀಡಿದರು.







## ವಿಸ್ತರಣಾ ಕಾರ್ಯಕರ್ತರಿಗೆ ದೃಷ್ಟಿಕೋನ ಕಾರ್ಯಕ್ರಮ



ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ದಿನಾಂಕ 14–10–2022 ರಂದು ತಮಿಳುನಾಡಿನ ಈರೋಡ್‌ನ ವಿಸ್ತರಣಾ ಕಾರ್ಯಕರ್ತರಿಗೆ ಕರಾವಳಿ ಕರ್ನಾಟಕದಲ್ಲಿ ಬೆಳೆಯುವ ತೋಟಗಾರಿಕಾ ಬೆಳೆಗಳ ಬಗ್ಗೆ ಸಂಕ್ಷಿಪ್ತ ಪರಿಚಯ, ತೋಟಗಾರಿಕಾ ಬೆಳೆಗಳ ವ್ಯಾಪ್ತಿ, ಪ್ರಾಮುಖ್ಯತೆ ಮತ್ತು ಕೃಷಿ ವಿಜ್ಞಾನ ಕೇಂದ್ರ, ಮಂಗಳೂರಿನಲ್ಲಿ ಕೈಗೊಂಡಿರುವ ತೋಟಗಾರಿಕೆ ಆಧಾರಿತ ಚಟುವಟಿಕೆಗಳು ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಒಂಬತ್ತು ಪ್ರಾಧ್ಯಾಪಕಿ ಸಹಾಯಕ ತೋಟಗಾರಿಕೆ ನಿರ್ದೇಶಕರು ಭಾಗವಹಿಸಿದ್ದರು.

## ವಿಶ್ವ ಮೊಟ್ಟೆ ದಿನಾಚರಣೆ- 2022:


ಭಾರತೀಯ ಕೃಷಿ ಅನುಸಂಧಾನ ಪರಿಷತ್ ಕೃಷಿ ವಿಜ್ಞಾನಕೇಂದ್ರ, ದಕ್ಷಿಣ ಕನ್ನಡ ಇವರ ವತಿಯಿಂದ ಕೃಷಿ ವಿಜ್ಞಾನ ಕೇಂದ್ರ ಮಂಗಳೂರಿನಲ್ಲಿ **ವಿಶ್ವ ಮೊಟ್ಟೆ ದಿನಾಚರಣೆ–2022**ನ್ನು **'ಉತ್ತಮ ಜೀವನಕ್ಕಾಗಿ ಮೊಟ್ಟೆ'** ಎಂಬ ಘೋಷವಾಕ್ಯದೊಂದಿಗೆ ಆಚರಿಸಲಾಯಿತು. ಡಾ. ಟಿ, ಜೆ. ರಮೇಶ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಡಾ. ಶಿವಕುಮಾರ್, ಆರ್., ಸಹಾಯಕ ಪ್ರಾಧ್ಯಾಪಕರು, ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು ಇವರು ಕಾರ್ಯಕ್ರಮದ ಸಂಯೋಜಕರಾಗಿದ್ದು, ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಭಿಕರಿಗೆ ಮೊಟ್ಟೆಯ ಮಹತ್ವ ಮತ್ತು ಅದರಲ್ಲಿರುವ ಪೋಷಕಾಂಶಗಳ ಬಗ್ಗೆ ತಿಳಿಸಿ ಎಲ್ಲರೂ ಕನಿಷ್ಠ ದಿನಕ್ಕೊಂದು ಮೊಟ್ಟೆಯನ್ನು ತಿನ್ನಲು ಸೂಚಿಸಿದರು. ಈ ಕಾರ್ಯಕ್ರಮದಲ್ಲಿ 87 ಜನರು ಭಾಗವಹಿಸಿದ್ದು ಎಲ್ಲರಿಗೂ ಒಂದೊಂದು ಬೇಯಿಸಿದ ಮೊಟ್ಟೆಯನ್ನು ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ವಿಜ್ಞಾನಿಗಳು ಮತ್ತು ಸಿಬ್ಬಂದಿಗಳು ಹಾಜರಿದ್ದರು.











## ರೈತರಿಗೆ ದೃಷ್ಟಿಕೋನ ಕಾರ್ಯಕ್ರಮ:



ಲಕ್ಷ್ಮೀಸಾಗರ ತೋಟಗಾರಿಕಾ ರೈತ ಉತ್ಪಾದಕರ ಕಂಪೆನಿ ನಿಯಮಿತ, ಶ್ರೀನಿವಾಸ ಪುರ, ಕೋಲಾರ ಜಿಲ್ಲೆಯ ಸದಸ್ಯರು ದಿನಾಂಕ 19–10–2022 ರಂದು ಕೃಷಿ ವಿಜ್ಞಾನ ಕೇಂದ್ರ, ಮಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ಕೃಷಿ ವಿಜ್ಞಾನ ಕೇಂದ್ರ, ಮಂಗಳೂರಿನಲ್ಲಿ ಕೈಗೊಂಡಿರುವ ತೋಟಗಾರಿಕೆ ಆಧಾರಿತ ಚಟುವಟಿಕೆಗಳ ಮತ್ತು ಕರಾವಳಿ ಕರ್ನಾಟಕದಲ್ಲಿ ಬೆಳೆಯುವ ತೋಟಗಾರಿಕಾ ಬೆಳೆಗಳ ಬಗ್ಗೆ ಸಂಕ್ಷಿಪ್ತ ಪರಿಚಯ, ತೋಟಗಾರಿಕಾ ಬೆಳೆಗಳ ವ್ಯಾಪ್ತಿ ಮತ್ತು ಪ್ರಾಮುಖ್ಯತೆ ಕುರಿತು ರೈತರಿಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ 54 ರೈತ ಉತ್ಪಾದಕರ ಕಂಪೆನಿಯ ಸದಸ್ಯರು ಭಾಗವಹಿಸಿದ್ದರು.

## ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸ

ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ ಮಂಗಳೂರು ಆಳ್ವಾಸ್ ಕೃಷಿ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಪ್ರಗತಿಪರ ಕೃಷಿಕ ಶ್ರೀ. ಗಣಪತಿ ಭಟ್ ಮತ್ತು ತೋಟಗಾರಿಕೆ ಕ್ಷೇತ್ರ ತುಂಬೆಗೆ ಶೈಕ್ಷಣಿಕ ಪ್ರವಾಸವನ್ನು ದಿನಾಂಕ 19–10–2022 ರಂದು ಹಮ್ಮಿಕೊಳ್ಳಲಾಗಿತ್ತು. ಅಡಿಕೆ ಮರ ಹತ್ತುವ ಸ್ಕೂಟರ್‌ನ ಸಂಶೋಧಕ ಮತ್ತು ಪ್ರಗತಿಪರ ಕೃಷಿಕರಾದ ಶ್ರೀ. ಗಣಪತಿ ಭಟ್‌ರವರು ಸ್ಕೂಟರ್‌ನಿಂದ ಅಡಿಕೆ ಮರ ಹತ್ತುವುದನ್ನು ನೇರ ಪ್ರದರ್ಶನದೊಂದಿಗೆ ವಿವರಿಸಿದರು ಮತ್ತು ಕಾಲಮ್ ವಿಧಾನದ ಕಾಳುಮೆಣಸು ಕೃಷಿ, ಅಡಿಕೆ, ಕೋಕೋ ಮತ್ತು ತೆಂಗು ಆಧಾರಿತ ಸಮಗ್ರ ಬೇಸಾಯದ ಬಗ್ಗೆ ಮಾಹಿತಿ ನೀಡಿದರು. ಶ್ರೀ. ಹರೀಶ್ ಕುಲಾಲ್, ಸಹಾಯಕ ತೋಟಗಾರಿಕೆ ಅಧಿಕಾರಿಯವರು ತೆಂಗಿನಲ್ಲಿ ಕಪ್ಪು ತಲೆ ಹುಳುವಿನ ಪರಾವಲಂಬಿ ಜೀವಿಯಾದ ಗೋನಿಯೋಜಸ್ ನೆಫಾಂಟಿಡಿಸ್‌ನ ಜೀವನ ಚಕ್ರ, ಅಭಿವೃದ್ಧಿ ಹಾಗೂ ಅಡಿಕೆ, ತೆಂಗು, ಸೀಬೆ, ಕೋಕೋ ಮತ್ತು ಕಾಳು ಮೆಣಸಿನಲ್ಲಿ ಸಮಗ್ರ ನಿರ್ವಹಣೆ ಮತ್ತು ಸಸ್ಯಾಭಿವೃದ್ಧಿ ಬಗ್ಗೆ ಮಾಹಿತಿಯನ್ನು ನೀಡಿದರು. ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ಅಡಿಕೆ, ತೆಂಗು, ಸೀಬೆ, ಕೋಕೋ ಮತ್ತು ಕಾಳುಮೆಣಸು ಬೆಳೆಯ ಸಮಗ್ರ ನಿರ್ವಹಣೆಯ ಕುರಿತು ಮಾಹಿತಿಯನ್ನು ನೀಡಿದರು. ಒಟ್ಟು 36 ದೇಸಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮೂಡುಬಿದಿರೆಯ ಆಳ್ವಾಸ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶ್ರೀ. ದೀಪಕ್ ಕೋಲ್ಕೆ ಮತ್ತು ಶ್ರೀಮತಿ ಕಾವ್ಯ ಸಾಲಿಯಾನ್, 36 ಕೃಷಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.





## ಸಮಸ್ಯಾತ್ಮಕ ಕ್ಷೇತ್ರಗಳ ಭೇಟಿ



ಅಡಿಕೆ ಎಲೆ ಚುಕ್ಕೆ ರೋಗ ಬಾಧಿತ ರೈತರ ಕ್ಷೇತ್ರಗಳಿಗೆ ವಿಜ್ಞಾನಿಗಳ ಭೇಟಿಯನ್ನು 2022–23 ನೇ ಸಾಲಿನ ಆತ್ಮ ಯೋಜನೆ ಕೃಷಿ ಇಲಾಖೆ ದಕ್ಷಿಣ ಕನ್ನಡ ಮತ್ತು ಕೃಷಿ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ದಿನಾಂಕ 18.10.2022 ಮತ್ತು 19.10.2022 ರಂದು ಹಮ್ಮಿಕೊಳ್ಳಲಾಗಿತ್ತು. ಡಾ. ಕೇದಾರನಾಥ, ವಿಜ್ಞಾನಿಗಳು ಕೆವಿಕೆ ಮಂಗಳೂರು ರವರು ಭಾಗವಹಿಸಿ ಅಡಿಕೆಯಲ್ಲಿ ಕಂಡು ಬರುವ ಎಲೆ ಚುಕ್ಕೆ ರೋಗದ ಲಕ್ಷಣಗಳು, ಅದರ ಗುರುತಿಸುವಿಕೆ ಮತ್ತು ಸಮಗ್ರ ನಿರ್ವಹಣೆ ಕುರಿತು ಮಾಹಿತಿಯನ್ನು ನೀಡಿ ಪ್ರೋಪಿಕೊನಜೋಲ್ 25 % ಇಸಿ @ 1 ಮಿಲಿ ಅಥವಾ ಕಾರ್ಬೇನ್‌ಡೈಜಿಯಮ್ 12 % + ಮ್ಯಾಂಕೊಜೆಬ್ 63 % ಡಬ್ಲ್ಯೂಪಿ ಅಥವಾ ಡೈಪೆನೊಕೊನಾಜೋಲ್ 25% ಇಸಿ @ 1 ಮಿಲಿ ಯನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು ಎಂದು ರೈತರಿಗೆ ಶಿಫಾರಿಸಿದರು.. ಶ್ರೀ ನಂದನ ಶೆಣೈ, ಸಹಾಯಕ ಕೃಷಿ ನಿರ್ದೇಶಕರು ಬಂಟ್ವಾಳ, ಶ್ರೀ ಪ್ರದೀಪ ಡಿಸೋಜಾ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಬಂಟ್ವಾಳ ಮತ್ತು ಆತ್ಮ ಯೋಜನೆಯ ಆಧಿಕಾರಿಗಳು ಭಾಗವಹಿಸಿದ್ದರು.

## ಅಡಿಕೆ ಎಲೆ ಚುಕ್ಕೆ ರೋಗದ ಸಮಗ್ರ ನಿರ್ವಹಣೆ

ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ ಮಂಗಳೂರು ಮತ್ತು ಪ್ರಾಥಮಿಕ ಕೃಷಿ ಸಹಕಾರಿ ಪತ್ತಿನ ಸಂಘ (ನಿ) ಉಬರಡ್ಕ ಇವರ ಸಹಯೋಗದಲ್ಲಿ ಅಡಿಕೆ ಎಲೆ ಚುಕ್ಕೆ ರೋಗದ ಸಮಗ್ರ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 28.10.2022 ರಂದು ಶ್ರೀ ನರಸಿಂಹ ಶಸ್ತವು ಸಭಾಭವನ, ಉಬರಡ್ಕ ದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಶ್ರೀ ರಾಜೇಶ ರವರು ಉದ್ಘಾಟಿಸಿದರು ಮತ್ತು ಶ್ರೀ ದಾಮೋದರ ಗೌಡ, ಅಧ್ಯಕ್ಷತೆಯನ್ನು ವಹಿಸಿದ್ದರು. ಡಾ. ಕೇದಾರನಾಥ, ವಿಜ್ಞಾನಿಗಳು ಕೆವಿಕೆ ಮಂಗಳೂರು ರವರು ಭಾಗವಹಿಸಿ ಅಡಿಕೆಯಲ್ಲಿ ಕಂಡು ಬರುವ ಎಲೆ ಚುಕ್ಕೆ ರೋಗದ ಲಕ್ಷಣಗಳು, ಅದರ ಗುರುತಿಸುವಿಕೆ ಮತ್ತು ಸಮಗ್ರ ನಿರ್ವಹಣೆ ಕುರಿತು ಮಾಹಿತಿಯನ್ನು ನೀಡಿದರು. ಶ್ರೀ ಜಯಪ್ರಕಾಶ, ಮುಖ್ಯಕಾರ್ಯನಿರ್ವಾಹಣ ಅಧಿಕಾರಿಗಳು, ಪ್ರಾಥಮಿಕ ಕೃಷಿ ಸಹಕಾರಿ ಪತ್ತಿನ ಸಂಘ ಉಬರಡ್ಕರವರು ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರನ್ನು ಸ್ವಾಗತಿಸಿದರು ಮತ್ತು 105 ರೈತರು ಭಾಗವಹಿಸಿದ್ದರು.





## ಪರಿವೀಕ್ಷಣಾ ಜಾಗೃತಿ ಸಪ್ತಾಹ ಆಚರಣೆ

ಭಾ.ಕೃ.ಅ.ಪ. ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ, ಕೇಂದ್ರಿಯ ಪರಿವೀಕ್ಷಣಾ ನಿರ್ದೇಶನಾಲಯ ಹಾಗೂ ಭಾ.ಕೃ.ಅ. ಪ. ದ. ನಿರ್ದೇಶನದಂತೆ ದಿನಾಂಕ 31.10.2022 ರಿಂದ 06.11.2022 ರವರೆಗೆ ಪರಿವೀಕ್ಷಣಾ ಜಾಗೃತಿ ಸಪ್ತಾಹವನ್ನು "ರಾಷ್ಟ್ರದ ಅಭಿವೃದ್ಧಿಗಾಗಿ ಭ್ರಷ್ಟಾಚಾರ ಮುಕ್ತ ಭಾರತ" ಎಂಬ ಘೋಷವಾಕ್ಯದೊಂದಿಗೆ ಆಚರಿಸಲಾಯಿತು. ರೈತರು, ರೈತ ಮಹಿಳೆಯರು, ವಿದ್ಯಾರ್ಥಿಗಳು, ಸರ್ಕಾರಿ ನೌಕರರು ಹಾಗೂ ಕೆವಿಕೆಯ ಸಿಬ್ಬಂದಿಗಳೊಂದಿಗೆ ಸಮಗ್ರತೆಯ ಪ್ರತಿಜ್ಞೆಯನ್ನು ಸ್ವೀಕರಿಸುವುದರ ಮೂಲಕ ಪರಿವೀಕ್ಷಣಾ ಜಾಗೃತಿ ಸಪ್ತಾಹವನ್ನು ಪ್ರಾರಂಭಿಸಲಾಯಿತು. ಭ್ರಷ್ಟಾಚಾರ ನಿರ್ಮೂಲನೆಗಾಗಿ, ಎಲ್ಲರೂ ಪ್ರಾಮಾಣಿಕವಾಗಿ ತಮ್ಮ ತಮ್ಮ ಕರ್ತವ್ಯಗಳ ನಿರ್ವಹಣೆಯಲ್ಲಿ ಪಾರದರ್ಶಕತೆ, ಕಾನೂನು ನಿಯಮಗಳ ಪಾಲನೆ, ಹೊಣೆಗಾರಿಕೆ ಹಾಗೂ ಸಂವೇದನಾ ಶೀಲರಾಗಲು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಗಳಲ್ಲಿ ಒಟ್ಟು 102 ಶಿಬಿರಾರ್ಥಿಗಳು ಭಾಗವಹಿಸಿದ್ದರು, ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿ ಡಾ. ಮಲ್ಲಿಕಾರ್ಜುನ ಎಲ್. ಕಾರ್ಯಕ್ರಮಗಳ ಸಂಯೋಜನೆ ಮಾಡಿದರು.











## ಕೃಷಿ ಪರಿಕರ ಮಾರಾಟಗಾರರಿಗೆ ಸಮಗ್ರ ಕೀಟ ನಿರ್ವಹಣೆ ತರಬೇತಿ ಕಾರ್ಯಕ್ರಮ


ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ, ಭಾರತೀಯ ಕೃಷಿ ಅನುಸಂಧಾನ ಪರಿಷತ್– ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಮಂಗಳೂರು ಮತ್ತು ಸಸ್ಯ ಸಂರಕ್ಷಣೆ, ಸಂಘರೋಧ ಮತ್ತು ಸಂಗ್ರಹಣಾ ನಿರ್ದೇಶನಾಲಯ, ಭಾರತ ಸರ್ಕಾರದ ಅಂಗಸಂಸ್ಥೆಯಾದ ಪ್ರಾದೇಶಿಕ ಕೇಂದ್ರಿಯ ಸಮಗ್ರ ಪೀಡೆ ನಿರ್ವಹಣಾ ಕೇಂದ್ರ, ಕಾಡುಗೋಡಿ, ಬೆಂಗಳೂರು ಇವರ ಸಹಭಾಗಿತ್ವದಲ್ಲಿ ರೈತರು ಮತ್ತು ಕೃಷಿ ಪರಿಕರ ಮಾರಾಟಗಾರರಿಗೆ ಎರಡು ದಿನಗಳ ಸಮಗ್ರ ಕೀಟ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 01.11.2022 ಮತ್ತು 02.11.2022 ರಂದು ಕೃಷಿ ವಿಜ್ಞಾನ ಕೇಂದ್ರ (ದ.ಕ) ಮಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಡಾ. ವಿವೇಕ ಉಪ್ಪಾರ, ಸಸ್ಯ ಸಂರಕ್ಷಣೆ ಅಧಿಕಾರಿಗಳು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಸಮಗ್ರ ಕೀಟ ನಿರ್ವಹಣೆ ಮತ್ತು ಆರ್.ಸಿ.ಐ.ಪಿ.ಎಮ್, ಬೆಂಗಳೂರು ಕೇಂದ್ರದಿಂದ ಹಮ್ಮಿಕೊಳ್ಳುವ ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಶ್ರೀ, ಶಾಹೀರ್ ಮತ್ತು ಡಾ. ಪಾವರಾಜ್, ಎಮ್. ಸಸ್ಯ ಸಂರಕ್ಷಣೆ ಅಧಿಕಾರಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಜೈವಿಕ ಕೀಟನಾಶಕಗಳ ಕುರಿತು ಮಾಹಿತಿ ನೀಡಿದರು. ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಟಿ. ಜೆ. ರಮೇಶರವರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ತಾಂತ್ರಿಕ ಮಾಹಿತಿಯನ್ನು ವಿಜ್ಞಾನಿಗಳಿಂದ ಪಡೆದು ವೈಜ್ಞಾನಿಕ ರೀತಿಯಲ್ಲಿ ಬೆಳೆಗಳನ್ನು ಬೆಳೆಯಬೇಕೆಂದು ತಿಳಿಸಿದರು. ಕೃಷಿ ವಿಜ್ಞಾನ ಕೇಂದ್ರದ ಸಸ್ಯ ಸಂರಕ್ಷಣೆ ವಿಜ್ಞಾನಿಗಳಾದ ಡಾ. ಕೇದಾರನಾಥರವರು ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಈ ಕಾರ್ಯಕ್ರಮದಲ್ಲಿ 53 ಕೃಷಿಕರು ಮತ್ತು ಕೃಷಿ ವಿಜ್ಞಾನ ಕೇಂದ್ರದ ಸಿಬ್ಬಂದಿಗಳು ಭಾಗವಹಿಸಿದ್ದರು.



## ಸಂಜೀವಿನಿ ಒಕ್ಕೂಟದ ಸದಸ್ಯರಿಗೆ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ:

ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ ಮಂಗಳೂರು ಮತ್ತು ತಾಲ್ಲೂಕು ಪಂಚಾಯತ್, ಮಂಗಳೂರು ಸಹಯೋಗದಲ್ಲಿ ಸಂಜೀವಿನಿ ಒಕ್ಕೂಟದ ಸದಸ್ಯರಿಗೆ ನರ್ಸರಿ ನಿರ್ವಹಣೆಯ ಕುರಿತು ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು ದಿನಾಂಕ 03–11–2022 ರಂದು ಆಯೋಜಿಸಲಾಗಿತ್ತು. ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು ಡಾ. ಟಿ.ಜೆ.ರಮೇಶರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದರು .





ಡಾ. ರಶ್ಮಿ ಆರ್. ರವರು ಕಾರ್ಯಕ್ರಮವನ್ನು ಸಂಯೋಜಿಸಿ ತೋಟಗಾರಿಕೆ ಬೆಳೆಗಳ ಸಸ್ಯಾಭಿವೃದ್ಧಿ, ವಿವಿಧ ಹಣ್ಣುಗಳ ಮತ್ತು ತರಕಾರಿಗಳ ನರ್ಸರಿ ನಿರ್ವಹಣೆ, ಪೌಷ್ಠಿಕ ಕೈತೋಟ ರಚನೆ ಮತ್ತು ಕಡಿಮೆ ಖರ್ಚಿನಲ್ಲಿ ಸ್ವಲ್ಪ ಸ್ಥಳಾವಕಾಶದಲ್ಲಿ ಉತ್ಕೃಷ್ಟ ಮತ್ತು ಅಧಿಕ ಪೌಷ್ಠಿಕತೆಯ ತರಕಾರಿಗಳ ಉತ್ಪಾದನೆ ಬಹಳ ಮಹತ್ವವೆನಿಸಿಕೊಂಡಿದೆ ಎಂದು ತಿಳಿಸಿಕೊಟ್ಟರು. ಎನ್‌ಆರ್‌ಎಲ್‌ಎಮ್‌ನ ಕಾರ್ಯಕ್ರಮದ ಸಂಯೋಜಕರಾದ ಶ್ರೀ. ಸುಬ್ರಮಣಿ ಮತ್ತು 16 ಸಂಜೀವಿನಿ ಒಕ್ಕೂಟದ ಸದಸ್ಯರು ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಂಡರು.

## ಮಜಲು ಗದ್ದೆಗಳಿಗೆ ಸಹ್ಯಾದ್ರಿ ಕೆಂಪುಮುಖಿ ಭತ್ತದ ತಳಿ





ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭತ್ತವು ಪ್ರಧಾನ ಮತ್ತು ಪ್ರಮುಖವಾದ ಆಹಾರ ಬೆಳೆಯಾಗಿದ್ದು, ಹೆಚ್ಚಾಗಿ ಮುಂಗಾರಿನ ಹಂಗಾಮಿನಲ್ಲಿ ಬಯಲು ಮತ್ತು ಮಜಲು ಗದ್ದೆಗಳಲ್ಲಿ ಬೆಳೆಯಲಾಗುತ್ತದೆ. ಕರಾವಳಿ ಪ್ರದೇಶದ ಭತ್ತ ಬೆಳೆಯುವ ಬಯಲು ಮತ್ತು ನೆರೆಪೀಡಿತ ಗದ್ದೆಗಳು ಕೇವಲ ಸಾಂಪ್ರದಾಯಿಕ ತಳಿಗಳಿಗೆ ಮಾತ್ರ ಹೆಚ್ಚಾಗಿ ಸೀಮಿತವಾಗಿವೆ. ಆದರೆ, ಈ ತಳಿಗಳು ಸಾಮಾನ್ಯವಾಗಿ ಎತ್ತರವಾಗಿ ಬೆಳೆಯುವ ಗುಣ ಹೊಂದಿದ್ದು ಸುಲಭವಾಗಿ ನೆಲಕ್ಕುರುಳುವ, ರಾಸಾಯನಿಕ ಗೊಬ್ಬರಗಳಿಗೆ ಸ್ಪಂದಿಸದ ಮತ್ತು ಕಡಿಮೆ ಇಳುವರಿ ಕೊಡುವ ತಳಿಗಳಾಗಿರುತ್ತವೆ. ಈ ಸಮಸ್ಯೆಯನ್ನು ಮನಗಂಡು ಡಾ. ನವೀನ್‌ಕುಮಾರ್ ಬಿ.ಟಿ. ವಿಜ್ಞಾನಿ (ಬೇಸಾಯ ಶಾಸ್ತ್ರ)ರವರು ಸಹ್ಯಾದ್ರಿ ಕೆಂಪುಮುಖಿ ತಳಿಯನ್ನು ದಕ್ಷಿಣ ಕನ್ನಡದಲ್ಲಿ ಜನಪ್ರಿಯಗೊಳಿಸಲು ಮುಂಚೂಣಿ ಪ್ರಾತ್ಯಕ್ಷಿಕೆ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ವಗ್ಗ, ಮಂಗಳೂರು ತಾಲ್ಲೂಕಿನ ಕಿಲೆಂಜಾರು ಮತ್ತು ಬಜ್ಪೆ ಗ್ರಾಮಗಳಲ್ಲಿ 10 ಎಕರೆ ಪ್ರದೇಶದಲ್ಲಿ ಅನುಷ್ಠಾನ ಗೊಳಿಸಲಾಯಿತು. ಈ ತಳಿಯನ್ನು ಜಿಲ್ಲೆಯಲ್ಲಿ ಪ್ರಸಿದ್ಧಿಗೊಳಿಸಲು 2 ಕ್ಷೇತ್ರೋತ್ಸವಗಳನ್ನು ಕಿಲೆಂಜಾರು ಹಾಗೂ ಕೆವಿಕೆಯಲ್ಲಿ 70 ರೈತರನ್ನು ಒಳಗೊಂಡು ಆಚರಿಸಲಾಯಿತು ಜನಪ್ರಿಯತೆಗಾಗಿ ಸುದ್ದಿ ಹಾಗೂ ದಿನ ಪತ್ರಿಕೆಗಳ ಮುಖಾಂತರ ಸಹ್ಯಾದ್ರಿ ಕೆಂಪುಮುಖಿ ತಳಿಯನ್ನು ಪ್ರಸಿದ್ಧಿಗೊಳಿಸಲಾಗಿತು.

## ಉಡುಪಿ ಮಲ್ಲಿಗೆಯ ಸಮಗ್ರ ಬೆಳೆ ನಿರ್ವಹಣೆಯ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ

ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ ಮಂಗಳೂರು 2022–23ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ತಂತ್ರಜ್ಞಾನ ಪರಿಶೀಲನೆ ಅಂಗವಾಗಿ ಉಡುಪಿ ಮಲ್ಲಿಗೆ ಗಿಡ ಸವರುವಿಕೆಯ ಸಮಯದ ಕುರಿತು ತಂತ್ರಜ್ಞಾನ ಪರಿಶೀಲನೆ ಕಾರ್ಯಕ್ರಮವನ್ನು ದಿನಾಂಕ 12–11–2022 ರಂದು ಬಂಟ್ವಾಳ ತಾಲ್ಲೂಕಿನ ದೇಲಂತುಬೆಟ್ಟು ಸೇಂಟ್ ಪೌಲ್ಸ್ ಚರ್ಚ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಪ್ರಗತಿಪರ ಕೃಷಿಕರಾದ ಶ್ರೀರಾಲ್ಫ್ ಡಿಸೋಜರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು, ದೇಲಂತುಬೆಟ್ಟು ಸೇಂಟ್ ಪೌಲ್ಸ್ ಚರ್ಚ್‌ನ ಫಾ. ಪೀಟರ್ ಸೆರಾವೋ ಅಧ್ಯಕ್ಷತೆಯನ್ನು ವಹಿಸಿದ್ದರು. ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಉಡುಪಿ ಮಲ್ಲಿಗೆಯ ಪ್ರಾಮುಖ್ಯತೆ, ಬೇಸಾಯ ಕ್ರಮಗಳು, ಸವುರುವಿಕೆ ಮಾಡುವ ಸಮಯದ ಕುರಿತು ಮಲ್ಲಿಗೆ ಗಿಡ ಸವರುವುದನ್ನು ಪದ್ಧತಿ ಪ್ರಾತ್ಯಕ್ಷಿಕೆ ಮುಖಾಂತರ ತೋರಿಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಡಾ. ಕೇದಾರನಾಥ, (ಸಸ್ಯ ಸಂರಕ್ಷಣ) ವಿಜ್ಞಾನಿಗಳು ಕೆವಿಕೆ ಮಂಗಳೂರು ರವರು ಮಲ್ಲಿಗೆ ಗಿಡಕ್ಕೆ ತಗಲುವ ರೋಗ ಮತ್ತು ಕೀಟಗಳ ಸಮಗ್ರ ನಿರ್ವಹಣೆ ಕುರಿತು ಮಾಹಿತಿಯನ್ನು ರೈತರಿಗೆ ನೀಡಿದರು. ಡಾ.ಮಲ್ಲಿಕಾರ್ಜುನ ಎಲ್, (ಮಣ್ಣು ವಿಜ್ಞಾನಿ) ಭಾಗವಹಿಸಿ ಮಣ್ಣು ಪರೀಕ್ಷೆಯ ಮಹತ್ವ ಮತ್ತು ಪೋಷಕಾಂಶಗಳ ಬಳಕೆ ಕುರಿತು ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ 16 ರೈತರು ಭಾಗವಹಿಸಿದ್ದರು.



## ಕಿಸಾನ್ ಮೇಳದಲ್ಲಿ ಕೆವಿಕೆ ಭಾಗವಹಿಸುವಿಕೆ



ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರವು ಕಿಸಾನ್ ಮೇಳದಲ್ಲಿ 19–23 ನವೆಂಬರ್ 2022 ರವರೆಗೆ ಭಾ.ಕೃ.ಅ.ಪ.– ಸಿ.ಪಿ.ಸಿ.ಆರ್.ಐ.–ಆರ್ ಸಿ, ಕಿಡುವಿನಲ್ಲಿ ಡಾ. ಟಿ, ಜೆ. ರಮೇಶ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ಅವರ ನೇತೃತ್ವದಲ್ಲಿ ಪ್ರದರ್ಶನವನ್ನು ಆಯೋಜಿಸಲಾಜಿತು. ಡಾ. ರಶ್ಮಿ ಆರ್. ರವರು ಕಾರ್ಯಕ್ರಮವನ್ನು ಸಂಯೋಜಿಸಿದರು. ಡಾ.ಮಲ್ಲಿಕಾರ್ಜುನ ಎಲ್, (ಮಣ್ಣು ವಿಜ್ಞಾನಿ), ಡಾ. ಶಿವಕುಮಾರ್, ಆರ್., ಸಹಾಯಕ ಪ್ರಾಧ್ಯಾಪಕರು (ಪಶು ವಿಜ್ಞಾನ), ಡಾ. ನವೀನ್‌ಕುಮಾರ್ ಬಿ.ಟಿ. ವಿಜ್ಞಾನಿ (ಬೇಸಾಯ ಶಾಸ್ತ್ರ), ಡಾ. ಚೇತನ್ ಎನ್., ವಿಜ್ಞಾನಿ (ಮೀನುಗಾರಿಕೆ), ಡಾ. ಕೇದಾರನಾಥ, ವಿಜ್ಞಾನಿ (ಸಸ್ಯ ಸಂರಕ್ಷಣೆ) ಮತ್ತು ಶ್ರೀ. ಸತೀಸ್ ನಾಯಕ್, ಕಾರ್ಯಕ್ರಮ ಸಹಾಯಕರು (ಗಣಕಯಂತ್ರ) ಕಿಸಾನ್ ಮೇಳದಲ್ಲಿ ಭಾಗವಹಿಸಿದ್ದರು. ಒಟ್ಟು 495 ರೈತರು ಮಳಿಗೆಗೆ ಭೇಟಿ ನೀಡಿದರು.

## ತೆಂಗು ಮತ್ತು ಅಡಿಕೆ ಬೆಳೆಯ ಸಮಗ್ರ ಪೀಡೆ ನಿರ್ವಹಣೆ

ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ, ದ.ಕ., ಮಂಗಳೂರು ಮತ್ತು ತೋಟಗಾರಿಕೆ ಇಲಾಖೆ ಬೆಳ್ತಂಗಡಿ, ದಕ್ಷಿಣ ಕನ್ನಡ ಇವರ ಸಹಭಾಗಿತ್ವದಲ್ಲಿ ನವಚೇತನ ತೋಟಗಾರಿಕಾ ರೈತ ಉತ್ಪಾದಕರ ಕಂಪೆನಿ ನಿಯಮಿತ, ಕಲ್ಲೇರಿ, ಬೆಳ್ತಂಗಡಿಯ ಸದಸ್ಯರಿಗೆ ತೆಂಗು ಬೆಳೆಯಲ್ಲಿ ಕೆಂಪು ಮೂತಿ ಹುಳು ಮತ್ತು ರೈನೋಸರಸ್ ದುಂಬಿ, ಅಡಿಕೆಯಲ್ಲಿ ಬೇರು ಹುಳು ಮತ್ತು ಎಲೆ ಚುಕ್ಕೆ ರೋಗ ನಿರ್ವಹಣೆ ಮಾಡಲು ಮೋಹಕ ಬಲೆಗಳ ಬಳಸುವ ಪ್ರಾತ್ಯಕ್ಷಿಕೆ ಮತ್ತು ಕ್ಷೇತ್ರ ಭೇಟಿಗಳನ್ನು ದಿನಾಂಕ 15–11–2022, 16–21–2022 ಮತ್ತು 23–11–2022 ರಂದು ಬೆಳ್ತಂಗಡಿ ತಾಲ್ಲೂಕಿನ ಮೊಗರು, ಮುಗೇರಡ್ಕ ಮತ್ತು ಕಡಮ್ಮಜೆ ಗ್ರಾಮಗಳಲ್ಲಿ ಆಯೋಜಿಸಲಾಗಿತ್ತು. ಡಾ. ಕೇದಾರನಾಥ, ಸಸ್ಯ ಸಂರಕ್ಷಣೆ ವಿಜ್ಞಾನಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ಡಾ. ಟಿ.ಜೆ.ರಮೇಶ ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಡಾ. ರಶ್ಮಿ ಆರ್. ರವರು ಕಾರ್ಯಕ್ರಮವನ್ನು ಸಂಯೋಜಿಸಿ, ಅಡಿಕೆ ಮತ್ತು ತೆಂಗು ಬೆಳೆಗಳ ಸಮಗ್ರ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ಡಾ. ರಾಜಕುಮಾರ, ವಿಜ್ಞಾನಿ ಭಾ.ಕೃ.ಅ.ಪ.–ಸಿಪಿಸಿಆರ್‌ಐ, ಕಾಸರಗೋಡು ಅಡಿಕೆಯಲ್ಲಿ ಬೇರು ಹುಳು ನಿರ್ವಹಣೆ ಮಾಡಲು ಇಪಿಎನ್ ಬಳಕೆಯ ವಿಧಾನದ ಪ್ರಾತ್ಯಕ್ಷಿಕೆಯನ್ನು ನೀಡಿದರು. ಒಟ್ಟು 114 ರೈತ ಉತ್ಪಾದಕರ ಕಂಪೆನಿ ಸದಸ್ಯರು ಮೂರು ಕಾರ್ಯಕ್ರಮಗಳಿಂದ ಪ್ರಯೋಜನ ಪಡೆದರು ಮತ್ತು 35 ರೈತರಿಗೆ ಪರಿಕರಗಳನ್ನು ನೀಡಲಾಯಿತು.








## ವಿಶ್ವ ಮೀನುಗಾರಿಕಾ ದಿನಾಚರಣೆ

ವಿಶ್ವ ಮೀನುಗಾರಿಕಾ ದಿನವನ್ನು ಪ್ರತಿ ವರ್ಷನವೆಂಬರ್ 21 ರಂದು ವಿಶ್ವದಾದ್ಯಂತ ಮೀನುಗಾರ ಸಮುದಾಯಗಳಿಂದ ಆಚರಿಸಲಾಗುತ್ತದೆ. ವಿಶ್ವದ ಮೀನುಗಾರಿಕೆ ಮತ್ತು ಪರಿಸರ ವ್ಯವಸ್ಥೆ, ಆರೋಗ್ಯಕರ ಸಾಗರಗಳು ಮತ್ತು ಸುತ್ತಮುತ್ತಲಿನ ಸಮತೋಲನವನ್ನು ಕಾಪಾಡಿಕೊಳ್ಳುವ ಮಹತ್ವವನ್ನು ಎತ್ತಿತೋರಿಸಲಾಗುತ್ತದೆ. ಇದು ಮೀನುಗಾರ ಸಮುದಾಯಕ್ಕೆ ಮಹತ್ವದ ದಿನವಾಗಿದೆ ಮತ್ತು ಈ ರೀತಿಯ ಕಾರ್ಯಕ್ರಮಗಳ ಆಚರಣೆಯೊಂದಿಗೆ ಅವರ ಶ್ರಮವನ್ನು ಪ್ರಶಂಸಿಸಲಾಗುತ್ತದೆ. ಕೆವಿಕೆ, ದಕ್ಷಿಣ ಕನ್ನಡ ಜಿಲ್ಲೆಯ ವಿವಿಧರೈತರನ್ನು ಆಹ್ವಾನಿಸಿ ಕೆವಿಕೆಯಲ್ಲಿ ವಿಶ್ವ ಮೀನುಗಾರಿಕಾ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀ. ಭಾಗ್ಯರಾಜ್, ಶ್ರೀ. ಸುದರ್ಶನ್ ಮುಂತಾದ ಪ್ರಗತಿಪರ ರೈತರು ವಿಶ್ವ ಮೀನುಗಾರಿಕಾ ದಿನಾಚರಣೆ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ರೈತ ಸಮುದಾಯಕ್ಕೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕರಾವಳಿ ಜಿಲ್ಲೆಗಳಲ್ಲಿನ ಕೃಷಿ ಹೊಂಡಗಳನ್ನು ಇಲ್ಲಿಯವರೆಗೆ ಶೇಖರಣಾ ಉದ್ದೇಶಗಳಿಗಾಗಿ ಮಾತ್ರ ಬಳಸಲಾಗುತ್ತಿದೆ ಮತ್ತು ಜಾಗೃತಿ ಕಾರ್ಯಕ್ರಮಗಳು ಮತ್ತು ಲಭ್ಯವಿರುವ ನೀರಿನ ಸಂಪನ್ಮೂಲಗಳ ಸುಸ್ಥಿರ ಬಳಕೆಯ ಬಗ್ಗೆ ರೈತ ಸಮುದಾಯಕ್ಕೆ ತಿಳುವಳಿಕೆ ನೀಡುವುದರಿಂದ, ರೈತ ಸಮುದಾಯವು ಕಡಿಮೆ ವೆಚ್ಚದಲ್ಲಿ ಹೆಚ್ಚುವರಿ ಆದಾಯಕ್ಕಾಗಿ ಮೀನು ಕೃಷಿಯನ್ನು ಮಾಡಲಾಗುತ್ತಿದೆ.

ಡಾ. ಚೇತನ್‌ಎನ್. ವಿಜ್ಞಾನಿ (ಮೀನುಗಾರಿಕೆ) ಅವರು ಕೃಷಿ ಸಮುದಾಯಕ್ಕೆ ನೀರಿನ ಬಳಕೆ, ಸಾಕಣೆ ತಂತ್ರಗಳು, ಮೀನು ಮರಿಗಳ ಆಯ್ಕೆ ಮತ್ತು ಸಂಗ್ರಹಣೆ, ಕೃಷಿ ವಿಧಾನಗಳು ಮತ್ತು ಕೃಷಿ ಹೊಂಡಗಳಲ್ಲಿ ಜಲಚರ ಪ್ರಾಣಿಗಳ ನಿರ್ವಹಣೆಯ ಅಂಶಗಳ ಕುರಿತು ತರಬೇತಿ ನೀಡಿದರು. ಶಿಬಿರಾರ್ಥಿಗಳಿಂದ ಮೀನಿನ ಕೊಳದಲ್ಲಿನ ಮೀನಿನ ನೈಸರ್ಗಿಕ ಆಹಾರದ ಪ್ರಮಾಣವನ್ನು ಪರೀಕ್ಷಿಸಲಾಯಿತು ಹಾಗೂ ಸುಣ್ಣ ಮತ್ತು ಗೊಬ್ಬರ ಹಾಕುವ ವಿಧಾನದ ಪ್ರಾತ್ಯಕ್ಷಿಕೆಯನ್ನೂ ನಡೆಸಲಾಯಿತು





## ರಾಷ್ಟ್ರೀಯ ಹಾಲು ದಿನಾಚರಣೆ

ಭಾರತೀಯ ಕೃಷಿ ಅನುಸಂಧಾನ ಪರಿಷತ್ ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಇವರ ವತಿಯಿಂದ ರಾಷ್ಟ್ರೀಯ ಹಾಲು ದಿನಾಚರಣೆಯನ್ನು ದಿನಾಂಕ 26.11.2022 ರಂದು ಸರ್ಕಾರಿ ಪ್ರಾಥಮಿಕ ಶಾಲೆ, ವೆಲೆಸ್ಸಿಯಾ, ಮಂಗಳೂರಿನಲ್ಲಿ ಆಚರಿಸಲಾಯಿತು. ಈ ದಿನವನ್ನು ಭಾರತದ ಕ್ಷೀರ ಕ್ರಾಂತಿಯ ಪಿತಾ ಮಹಾ ಡಾ. ವರ್ಗೀಸ್ ಕುರಿಯನ್ ರವರ 101 ನೇಯ ಜನ್ಮದಿನೋತ್ಸವದ ಅಂಗವಾಗಿ ಆಚರಿಸಲಾಯಿತು. ಡಾ. ಟಿ, ಜೆ. ರಮೇಶ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಡಾ. ಶಿವಕುಮಾರ್, ಆರ್., ಸಹಾಯಕ ಪ್ರಾಧ್ಯಾಪಕರು, ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು ಇವರು ಕಾರ್ಯಕ್ರಮದ ಸಂಯೋಜಕರಾಗಿದ್ದು, ಕಾರ್ಯಕ್ರಮದಲ್ಲಿ ಭಾಗವಹಿಸಿದ ಶಾಲಾ ಮಕ್ಕಳಿಗೆ ಮತ್ತು ಪೋಷಕರಿಗೆ, ಮನುಷ್ಯನ ಜೀವನದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಹತ್ವ ಹಾಗೂ ಅದರಿಂದಾಗುವ ಪ್ರಯೋಜನಗಳ ಬಗ್ಗೆ ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಹಾಜರಿದ್ದ ಶಾಲಾ ಮಕ್ಕಳಿಗೆ ನಂದಿನಿ ಸುಹಾಸಿತ ಹಾಲನ್ನು ವಿತರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಡಾ. ಮಲ್ಲಿಕಾರ್ಜುನ. ಎಲ್, (ಮಣ್ಣುವಿಜ್ಞಾನ) ಮತ್ತು ಸಿಬ್ಬಂದಿಗಳು ಹಾಜರಿದ್ದರು.





## ಅಡಿಕೆ ಬೆಳೆಯಲ್ಲಿ ಸಮಗ್ರ ರೋಗಗಳ ನಿರ್ವಹಣೆ

ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ ಮಂಗಳೂರು ಅಡಿಕೆ ಬೆಳೆಯಲ್ಲಿ ಹಿಂಗಾರ ಒಣಗುವ ರೋಗ ಮತ್ತು ಎಳೆ ಕಾಯಿ ಉದುರುವಿಕೆ ಕುರಿತು ತರಬೇತಿ ಕಾರ್ಯಕ್ರಮವನ್ನು ಬೆಳ್ತಂಗಡಿ ತಾಲೂಕಿನ ಬಳಂಜ ಗ್ರಾಮದಲ್ಲಿ ದಿನಾಂಕ 09.12.2022 ರಂದು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಡಾ. ಕೇದಾರನಾಥ, ಸಸ್ಯ ಸಂರಕ್ಷಣೆ ವಿಜ್ಞಾನಿಗಳು ಕೆವಿಕೆ ಮಂಗಳೂರು ರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ರೈತರಿಗೆ ಮಾಹಿತಿ ನೀಡಿದರು. ಡಾ.ಮಲ್ಲಿಕಾರ್ಜುನ್ ಎಲ್, ಮಣ್ಣು ವಿಜ್ಞಾನಿಗಳು ಭಾಗವಹಿಸಿ ಮಣ್ಣು ಪರೀಕ್ಷೆಯ ಮಹತ್ವ ಮತ್ತು ಪೋಷಕಾಂಶಗಳ ಬಳಕೆ ಕುರಿತು ಮಾಹಿತಿಯನ್ನು ನೀಡಿದರು. ಡಾ. ಶಿವಕುಮಾರ, ಪಶು ವಿಜ್ಞಾನಿಗಳು, ಕೆವಿಕೆ ಮಂಗಳೂರು ಮತ್ತು 16 ರೈತರು ಭಾಗವಹಿಸಿದ್ದರು




## ವಿಶ್ವ ಮಣ್ಣು ಆರೋಗ್ಯ ದಿನಾಚರಣೆ

ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆ ತೆಂಗು ರೈತ ಉತ್ಪಾದಕರ ಕಂಪೆನಿ ನಿಯಮಿತ, ವಿಟ್ಲ ಇವರ ಸಹಯೋಗದಲ್ಲಿ "ವಿಶ್ವ ಮಣ್ಣು ದಿನಾಚರಣೆ" ಸುಳ್ಯ ತಾಲೂಕಿನಲ್ಲಿ 5ನೇ ಡಿಸೆಂಬರ್ 2022ರಂದು 'ಮಣ್ಣು: ಆಹಾರದ ಮೂಲ'ಎಂಬ ಘೋಷವಾಕ್ಯದೊಂದಿಗೆ ಭಾ.ಕೃ.ಅ.ಪ. ದ. ನಿರ್ದೇಶನದಂತೆ ಆಚರಿಸಲಾಯಿತು. ಆರೋಗ್ಯಕರ ಮಣ್ಣಿನ ಪ್ರಾಮುಖ್ಯತೆ ಮತ್ತು ಅದರ ಸುಸ್ಥಿರ ನಿರ್ವಹಣೆಗಾಗಿ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಪ್ರತಿ ವರ್ಷ 5 ನೇ ಡಿಸೆಂಬರ್‌ದಂದು ವಿಶ್ವ ಮಣ್ಣು ದಿನಾಚರಣೆಯನ್ನು ಆಚರಿಸಲಾಗುತ್ತದೆ ನಂತರ ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿ ಡಾ. ಮಲ್ಲಿಕಾರ್ಜುನ.ಎಲ್. ಕಾರ್ಯಕ್ರಮವನ್ನು ಸಂಯೋಜಿಸಿ, ಕೃಷಿಯಲ್ಲಿ ಹೆಚ್ಚುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಉತ್ತಮ ಮಣ್ಣಿನ ನಿರ್ವಹಣೆ ಅವಶ್ಯವಾಗಿದೆ, ಆದ್ದರಿಂದ ಮಣ್ಣಿನ ಆರೋಗ್ಯ ಕಾಪಾಡಲು ರೈತ ಸಮುದಾಯ, ಸಾರ್ವಜನಿಕರಲ್ಲಿ ಅರಿವು ಹೆಚ್ಚಿಸಲು ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.ಈ ಸಂದರ್ಭದಲ್ಲಿ ತರಬೇತಿ ಪಡೆದ ಮಿಲಿಶಾ ಜಿ ನಾಯಕ್ ಮತ್ತು ಜಯಪ್ರದಾ ಎನ್ ಪಿ ಇವರಿಗೆ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಲಾಯಿತು, ಜೊತೆಗೆ ದಕ್ಷಿಣಕನ್ನಡ ಜಿಲ್ಲೆ ತೆಂಗು ರೈತ ಉತ್ಪಾದಕರ ಕಂಪೆನಿಯ ನೂತನ ಮಣ್ಣು ಪರೀಕ್ಷಾ ಪ್ರಯೋಗಾಲಯವನ್ನು ಉದ್ಘಾಟಿಸಲಾಯಿತು. ಪಶು ವಿಜ್ಞಾನಿ ಯಾದ ಡಾ. ಶಿವಕುಮಾರ ಆರ್., ಸಹಾಯಕ ತೋಟಗಾರಿಕಾ ನಿರ್ದೇಶಕಿ ಶ್ರೀಮತಿ ಸುಹಾನ, ತೆಂಗು ರೈತ ಉತ್ಪಾದಕರ ಕಂಪೆನಿ ಸಿಬ್ಬಂದಿಗಳು ಹಾಗೂ 28ರೈತರು ಹಾಗೂ ರೈತ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.





## ನೈಸರ್ಗಿಕ ಕೃಷಿಯ ಕುರಿತು ರಾಷ್ಟ್ರೀಯ ಕಾರ್ಯಗಾರ ಹಾಗೂ ತರಬೇತಿಯಲ್ಲಿ ಭಾಗವಹಿಸಿರುವುದು

ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ಶಾಸ್ತ್ರ ವಿಜ್ಞಾನಿ ಹಾಗೂ ನೈಸರ್ಗಿಕ ಕೃಷಿ ಯೋಜನೆಯ ನೋಡಲ್ ವಿಜ್ಞಾನಿಯಾದ ಡಾ. ನವೀನ್‌ಕುಮಾರ್, ಬಿ.ಟಿ. ಯವರು 03–12–2022 ರಂದು ರಾಜಮಾತ ವಿಜಯರಾಜೆ ಸಿಂದಿಯ ಕೃಷಿ ವಿಶ್ವವಿದ್ಯಾಲಯ, ಗ್ವಾಲಿಯರ್, ಮಧ್ಯ ಪ್ರದೇಶದಲ್ಲಿ ನಡೆದ ನೈಸರ್ಗಿಕ ಕೃಷಿಯ ಕುರಿತು ಒಂದು ದಿನದ ರಾಷ್ಟ್ರೀಯ ಕಾರ್ಯಗಾರ ಹಾಗೂ ರಾಜ್ಯ ನೈಸರ್ಗಿಕ ಕೃಷಿಯ ಪರೀಕ್ಷಾ ಕೇಂದ್ರ, ಗುರುಕುಲ, ಕುರುಕ್ಷೇತ್ರ, ಹರಿಯಾಣದಲ್ಲಿ 05–12–2022 ರಿಂದ 06–12–2022 ರವರೆಗೆ ನಡೆದ ಎರಡು ದಿನದ ತರಬೇತಿಯಲ್ಲಿ ಭಾಗವಹಿಸಿದ್ದರು.




## ಬೆಂಡೆ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕುರಿತು ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ

ಭಾ. ಕೃ. ಅ. ಪ.–ಕೃಷಿ ವಿಜ್ಞಾನ ಕೇಂದ್ರ (ದಕ) ಮಂಗಳೂರು 07–12–2022 ರಂದು ಮೂಡಬಿದರಿ ತಾಲ್ಲೂಕಿನ ಇಡ್ಡಬೆಟ್ಟು ಸಂಪಿಗೆ ಗ್ರಾಮದಲ್ಲಿ 2022–23ನೇ ಸಾಲಿನ ಕ್ರಿಯಾ ಯೋಜನೆಯ ಅಂಗವಾಗಿ ಬೆಂಡೆ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಆರಂಭಿಸಲು ರೈತರಿಗೆ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಪ್ರಗತಿಪರ ಕೃಷಿಕರಾದ ಶ್ರೀ ಹರೀಶ್ ಕೋಟ್ಯಾನ್‌ರವರು ಉದ್ಘಾಟಿಸಿದರು. ಶ್ರೀ. ಶ್ಯಾಮಸುಂದರ ರಾವ್, ನಿವೃತ್ತ ಶಿಕ್ಷಕರು ಮತ್ತು ಪ್ರಗತಿಪರ ರೈತರು, ಅಧ್ಯಕ್ಷತೆಯನ್ನು ವಹಿಸಿದ್ದರು.ಡಾ. ರಶ್ಮಿ ಆರ್. ತೋಟಗಾರಿಕೆ ವಿಜ್ಞಾನಿ, ಕೃಷಿ ವಿಜ್ಞಾನ ಕೇಂದ್ರ ಕಾರ್ಯಕ್ರಮವನ್ನು ಸಂಯೋಜಿಸಿ, ಬೆಂಡೆ ಬೆಳೆಯ ಸುಧಾರಿತ ಬೇಸಾಯ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಡಾ. ಕೇದಾರನಾಥ, ಸಸ್ಯ ಸಂರಕ್ಷಣೆ ವಿಜ್ಞಾನಿ ಮತ್ತು ಡಾ.ಮಲ್ಲಿಕಾರ್ಜುನ್ ಎಲ್, ಮಣ್ಣು ವಿಜ್ಞಾನಿ, ಕೆವಿಕೆ ಮಂಗಳೂರು, ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ. ಬೆಂಡೆ ಬೆಳೆಯ ರೋಗ ಮತ್ತು ಕೀಟಗಳ ಸಮಗ್ರ ನಿರ್ವಹಣೆ, ಸಮಗ್ರ ಪೋಷಕಾಂಶಗಳ ಬಳಕೆ ಮತ್ತು ಮಣ್ಣು ಪರೀಕ್ಷೆಯ ಮಹತ್ವದ ಕುರಿತು ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ ಬೆಂಡೆ ಬೆಳೆಯುವ 10 ಜನ ರೈತರು ಭಾಗವಹಿಸಿದ್ದರು.





## ಅಡಿಕೆ ಬೆಳೆಯಲ್ಲಿ ಕಾಯಿ ಸೀಳುವಿಕೆ ಮತ್ತುಉದುರುವಿಕೆ ಸಮಸ್ಯೆ ನಿರ್ವಹಣೆ

ಭಾ. ಕೃ. ಅ. ಪ. ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ, ಅಡಿಕೆ ಬೆಳೆಯಲ್ಲಿ ಕಾಯಿ ಸೀಳುವಿಕೆ ಮತ್ತು ಉದುರುವಿಕೆ ಸಮಸ್ಯೆ ನಿರ್ವಹಣೆ ಕುರಿತು ಪುತ್ತೂರು ತಾಲೂಕಿನ ಕಾವು ಗ್ರಾಮದಲ್ಲಿ ಒಂದು ದಿನದ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ರೈತ ಮತ್ತುರೈತ ಮಹಿಳೆಯರಿಗೆ ದಿನಾಂಕ 08.12.2022 ರಂದು ಹಮ್ಮಿಕೊಳ್ಳಲಾಯಿತು. ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿಯಾದ ಡಾ. ಮಲ್ಲಿಕಾರ್ಜುನಎಲ್. ಕಾರ್ಯಕ್ರಮವನ್ನು ಸಂಯೋಜಿಸಿ, ಸಾಮಾನ್ಯವಾಗಿ ಅಡಿಕೆ ಸೀಳುವುದು, ಉದುರುವುದು ಎಲ್ಲಾ ರೈತರ ತೋಟಗಳಲ್ಲಿ ಕಂಡು ಬರುವ ಸಮಸ್ಯೆಯಾಗಿದೆ. ಇದು ಬಹುತೇಕ ಸಸ್ಯ ಶಾರೀರಿಕ, ಮಣ್ಣಿನಲ್ಲಿ ಅತಿಯಾದ ತೇವಾಂಶದಿಂದ ಹಾಗೂ ಬಹು ಪೋಷಕಾಂಶ ಕೊರತೆಯಿಂದ ಉಂಟಾಗುತ್ತದೆ ಆದ್ದರಿಂದ, ಬೋರಾನ್‌ನ (0.2%) ಸಿಂಪಡಣೆ, ಶಿಫಾರಸ್ಸಿನ ಪೊಟ್ಯಾಷ್ ಹಾಗೂ ಕ್ಯಾಲ್ಸಿಯಂ ನ ನಿಯಮಿತ ಬಳಕೆಯಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎಂದು ತಿಳಿಸಿದರು. ತೋಟಗಾರಿಕಾ ವಿಜ್ಞಾನಿಯಾದ  ಡಾ. ರಶ್ಮಿ ಆರ್. ಅಡಿಕೆ ಕೃಷಿಯಲ್ಲಿ ವೈಜ್ಞಾನಿಕ ಪದ್ಧತಿಗಳನ್ನು ಅನುಸರಿಸಲು ಸೂಚಿಸಿದರು. ಒಟ್ಟು 32 ರೈತರು ಹಾಗೂ ರೈತ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.







## ಅಡಿಕೆ ಇಳುವರಿ ಮತ್ತು ಕರಾವಳಿ ಪ್ರದೇಶದ ಹುಳಿ ಮಣ್ಣಿನ ಮೇಲೆ ಡೋಲೋಮೈಟ್'ನ ಪ್ರಭಾವದ ಕುರಿತು ತರಬೇತಿ ಕಾರ್ಯಕ್ರಮ

ಭಾ.ಕೃ.ಅ.ಪ. ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ, ಅಡಿಕೆ ಇಳುವರಿ ಮತ್ತು ಕರಾವಳಿ ಪ್ರದೇಶದ ಹುಳಿ ಮಣ್ಣಿನ ಮೇಲೆ ಡೋಲೋಮೈಟ್'ನ ಪ್ರಭಾವದ ಕುರಿತು ತರಬೇತಿ ಕಾರ್ಯಕ್ರಮವನ್ನು ಬೆಳ್ತಂಗಡಿ ತಾಲೂಕಿನ ಬಳಂಜಾ ಗ್ರಾಮದ ರೈತ ಮತ್ತು ರೈತ ಮಹಿಳೆಯರಿಗಾಗಿ ದಿನಾಂಕ 09.12.2022 ರಂದು ಹಮ್ಮಿಕೊಳ್ಳಲಾಯಿತು. ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿಯಾದ ಡಾ. ಮಲ್ಲಿಕಾರ್ಜುನ. ಎಲ್. ಕಾರ್ಯಕ್ರಮವನ್ನು ಸಂಯೋಜಿಸಿ, ಮಣ್ಣಿನಲ್ಲಿರುವ ರಂಜಕ ಮತ್ತು ಪೊಟ್ಯಾಷ್ ಸಸ್ಯಗಳಿಗೆ ಲಭಿಸಲು ಹುಳಿ ಮಣ್ಣಿನ ಸುಧಾರಣೆ ಅವಶ್ಯಕವಾಗಿದೆ, ಅದಕ್ಕಾಗಿ ಶಿಫಾರಸ್ಸಿನ ಪ್ರಮಾಣದ ಡೋಲೊಮೈಟ್ ನ್ನು ಬಳಕೆ ಮಾಡಬೇಕು ಎಂದು ರೈತರಿಗೆ ತಿಳಿಸಿದರು. ಸಸ್ಯ ಸಂರಕ್ಷಣಾ ವಿಜ್ಞಾನಿ ಡಾ. ಕೇದಾರನಾಥ, ಮಾತನಾಡಿ, ಅಡಿಕೆ ಬೆಳೆಯಲ್ಲಿ ಕಂಡುಬರುವ ಕೀಟ ಹಾಗೂ ರೋಗಗಳ ನಿರ್ವಹಣೆ, ಜೈವಿಕ ಪೀಡೆನಾಶಕಗಳ ಬಳಕೆ ಕುರಿತು ಮಾಹಿತಿ ನೀಡಿದರು. ಒಟ್ಟು 14 ರೈತರು ಹಾಗೂ ರೈತ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.





## ತೋಟಗಾರಿಕೆ ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳು

ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ ಮಂಗಳೂರು ಮತ್ತು ಪ್ರಾಥಮಿಕ ಕೃಷಿ ಸಹಕಾರಿ ಪತ್ತಿನ ಸಂಘ (ನಿ)ಮುಂಡೂರು ಸಹಯೋಗದಲ್ಲಿ ತೋಟಗಾರಿಕೆ ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳು ಮತ್ತು ಗೇರು ಬೆಳೆಯಲ್ಲಿ ಕಾಂಡ ಮತ್ತು ಬೇರು ಹುಳುವಿನ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 12.122022 ರಂದು ಪ್ರಾಥಮಿಕ ಕೃಷಿ ಸಹಕಾರಿ ಪತ್ತಿನ ಸಂಘ (ನಿ) ಮುಂಡೂರಿನ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಶ್ರೀಮತಿ ತ್ರಿವೇಣಿ ರಾವ್ ಕೆ. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಪುತ್ತೂರು ವಿಭಾಗದವರು ಉದ್ಘಾಟಿಸಿದರು ಮತ್ತು ಶ್ರೀ ಸುರೇಶ್ ಕುಮಾರ್ ಸೊರಕೆ, ಅಧ್ಯಕ್ಷತೆಯನ್ನು ವಹಿಸಿ ರೈತರಿಗೆ ಕಾರ್ಯಕ್ರಮದ ಸದುಪಯೋಗ ಪಡೆಯಬೇಕೆಂದು ತಿಳಿಸಿದರು. ಡಾ. ಟಿ. ಜೆ. ರಮೇಶ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ಕೆವಿಕೆ ಮಂಗಳೂರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ರೈತರ ಆರ್ಥಿಕ ವ್ಯವಸ್ಥೆ ಸುಧಾರಿಸುವಲ್ಲಿ ವೈಜ್ಞಾನಿಕ ಕೃಷಿಯ ಮಹತ್ವದ ಬಗ್ಗೆ ಮಾಹಿತಿ ನೀಡಿದರು.ಡಾ. ಕೇದಾರನಾಥ, ವಿಜ್ಞಾನಿಗಳು ಕೆವಿಕೆ ಮಂಗಳೂರು ರವರು ಭಾಗವಹಿಸಿ ತೋಟಗಾರಿಕೆ ಬೆಳೆಗಳಲ್ಲಿ ಕಂಡು ಬರುವ ಕೀಟ ಮತ್ತು ರೋಗಗಳ ಸಮಗ್ರ ನಿರ್ವಹಣಾ ಪದ್ಧತಿಗಳ ಬಗ್ಗೆ ಮಾಹಿತಿ ನೀಡಿದರು. ಡಾ. ರಶ್ಮಿ ಆರ್ ವಿಜ್ಞಾನಿಗಳು, ತೋಟಗಾರಿಕೆ, ಕೆವಿಕೆ ಮಂಗಳೂರುರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ದಕ್ಷಿಣ ಕನ್ನಡದಲ್ಲಿ ಬೆಳೆಯುವ ಪ್ರಮುಖ ತೋಟಗಾರಿಕೆ ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳು ಮತ್ತು ಅವುಗಳ ಸಸ್ಯಾಭಿವೃದ್ಧಿಯ ಕುರಿತು ಮಾಹಿತಿ ನೀಡಿದರು. ಶ್ರೀ ಜಯಪ್ರಕಾಶ್, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಪ್ರಾಥಮಿಕ ಕೃಷಿ ಸಹಕಾರಿ ಪತ್ತಿನ ಸಂಘ ಮುಂಡೂರು ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರನ್ನೂ ಸ್ವಾಗತಿಸಿದರು ಮತ್ತು 73 ರೈತರು ಭಾಗವಹಿಸಿದ್ದರು.







## ಹೈನುರಾಸುಗಳಲ್ಲಿ ಹಾಲಿನ ಇಳುವರಿ ಹೆಚ್ಚಿಸಲು ಪ್ರೋಬಯೋಟಿಕ್ಸ್‌ನ ಬಳಕೆ ಕುರಿತು ರೈತರ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ

ಭಾರತೀಯ ಕೃಷಿ ಅನುಸಂಧಾನ ಪರಿಷತ್ ಕೃಷಿ ವಿಜ್ಞಾನ ಕೇಂದ್ರ ಮಂಗಳೂರು ಇವರ ವತಿಯಿಂದ ದಿನಾಂಕ 14.12.2022 ರಂದು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಪೆರ್ಮುದೆ ಗ್ರಾಮದಲ್ಲಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ರೈತರಿಗೆ ಹಾಗು ರೈತ ಮಹಿಳೆಯರಿಗೆ ಹೈನುರಾಸುಗಳಲ್ಲಿ ಹಾಲಿನ ಇಳುವರಿ ಹೆಚ್ಚಿಸಲು ಪ್ರೋಬಯೋಟಿಕ್ಸ್‌ನ ಬಳಕೆ ವಿಷಯದಲ್ಲಿ ಒಂದು ದಿನದರೈತರ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಡಾ. ಶಿವಕುಮಾರ್, ಆರ್., ಸಹಾಯಕ ಪ್ರಾಧ್ಯಾಪಕರು, ಕೃಷಿ ವಿಜ್ಞಾನಕೇಂದ್ರ, ಮಂಗಳೂರು ಇವರು ಕಾರ್ಯಕ್ರಮವನ್ನು ಸಂಂಯೋಜಿಸಿದ್ದು ಪ್ರೋಬಯೋಟಿಕ್ಸ್‌ನ ಬಳಕೆಯಿಂದ ಆಗುವ ಪ್ರಯೋಜನಗಳ ಬಗ್ಗೆ ವಿವರಿಸಿದರು ಹಾಗೂ 10 ಜನ ಫಲಾನುಭವಿ ರ್ಯತರಿಗೆ ಮತ್ತು ರೈತ ಮಹಿಳೆಯರಿಗೆ ಮುಂಚೂಣಿ ಪ್ರಾತ್ಯಕ್ಷಿಕೆ ಅಂಗವಾಗಿ ಪ್ರೋಬಯೋಟಿಕ್ಸ್, ಖನಿಜ ಮಿಶ್ರಣ ಮತ್ತು ಜಂತು ಹುಳುವಿನ ಔಷಧಿಗಳನ್ನು ವಿತರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಡಾ. ಮಲ್ಲಿಕಾರ್ಜುನ್, ಎಲ್., ವಿಜ್ಞಾನಿಗಳು (ಮಣ್ಣು ವಿಜ್ಞಾನ) ಮತ್ತು ಡಾ. ನವೀನ್ ಕುಮಾರ್, ಬಿ. ಟಿ. ವಿಜ್ಞಾನಿಗಳು (ಬೇಸಾಯ ಶಾಸ್ತ್ರ) ಇವರು ಹಾಜರಿದ್ದು, ಸುಮಾರು 24 ಜನ ರೈತರು ಮತ್ತು ರೈತ ಮಹಿಳೆಯರು. ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.







## ತೆಂಗು ಮತ್ತು ಅಡಿಕೆ ಬೆಳೆಯ ಸಮಗ್ರ ಪೀಡೆ ನಿರ್ವಹಣೆ ಪ್ರಾತ್ಯಕ್ಷಿಕೆ

ಭಾ.ಕೃ.ಅ.ಪ–ಕೃಷಿ ವಿಜ್ಞಾನ ಕೇಂದ್ರ, ದ.ಕ., ಮಂಗಳೂರು ಮತ್ತು ತೋಟಗಾರಿಕೆ ಇಲಾಖೆ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಇವರ ಸಹಭಾಗಿತ್ವದಲ್ಲಿ ಪಿಂಗಾರ ತೋಟಗಾರಿಕಾ ರೈತ ಉತ್ಪಾದಕರ ಕಂಪೆನಿ ನಿಯಮಿತ, ವಿಟ್ಲ ಸದಸ್ಯರಿಗೆ ತೆಂಗು ಮತ್ತು ಅಡಕೆ ಬೆಳೆಯ ಸಮಗ್ರ ಪೀಡೆ ನಿರ್ವಹಣೆಯ ಪ್ರಾತ್ಯಕ್ಷಿಕೆ ಮತ್ತು ಕ್ಷೇತ್ರ ಭೇಟಿಗಳನ್ನು ದಿನಾಂಕ 15–12–2022, 16–21–2022 ಮತ್ತು 23–11–2022 ರಂದು ಬಂಟ್ವಾಳ ತಾಲ್ಲೂಕಿನ ವಿಟ್ಲ ಪಡ್ನೂರು, ಮಂಚಿಮತ್ತು ಕೇಪು ಗ್ರಾಮಗಳಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ರಾಮಕಿಶೋರ್, ಪಿಂಗಾರ ತೋಟಗಾರಿಕಾ ರೈತ ಉತ್ಪಾದಕರ ಕಂಪೆನಿಯ ಅಧ್ಯಕ್ಷರು ಉದ್ಘಾಟಿಸಿದರು. ಡಾ. ಟಿ.ಜೆ.ರಮೇಶರವರು ಕಾರ್ಯಕ್ರಮವನ್ನು ವೈಜ್ಞಾನಿಕ ತಂತ್ರಜ್ಞಾನಗಳನ್ನು ಅಳವಡಿಸಿ ಸಮಗ್ರ ಪೀಡೆ ನಿರ್ವಹಣೆ ಮಾಡಲು ತಿಳಿಸಿದರು. ಪದ್ಮಶ್ರೀ ಪುರಸ್ಕೃತರಾದ ಶ್ರೀ. ಅಮೈ ಮಹಾಲಿಂಗ ನಾಯ್ಕರವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಡಾ. ರಶ್ಮಿ ಆರ್. ರವರು ಕಾರ್ಯಕ್ರಮವನ್ನು ಸಂಯೋಜಿಸಿ, ಅಡಿಕೆ ಮತ್ತು ತೆಂಗು ಬೆಳೆಗಳ ಸಮಗ್ರ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ಡಾ. ಕೇದಾರನಾಥ, ಸಸ್ಯ ಸಂರಕ್ಷಣೆ ವಿಜ್ಞಾನಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ತೆಂಗು ಬೆಳೆಯಲ್ಲಿ ಕೆಂಪು ಮೂತಿ ಹುಳು ಮತ್ತು ರೈನೋಸರಸ್ ದುಂಬಿ ನಿರ್ವಹಣೆ ಮಾಡಲು ಮೋಹಕ ಬಲೆಗಳ ಬಳಸುವ ಪ್ರಾತ್ಯಕ್ಷಿಕೆಯನ್ನು ನೀಡಿದರು ಮತ್ತು ಡಾ. ರಾಜಕುಮಾರ, ವಿಜ್ಞಾನಿ ಭಾ.ಕೃ.ಅ.ಪ.–ಸಿಪಿಸಿಆರ್‌ಐ, ಕಾಸರಗೋಡು ಅಡಿಕೆಯಲ್ಲಿ ಬೇರು ಹುಳು ನಿರ್ವಹಣೆ ಮಾಡಲು ಇಪಿಎನ್ ಬಳಕೆಯ ವಿಧಾನದ ಪ್ರಾತ್ಯಕ್ಷಿಕೆಯನ್ನು ನೀಡಿದರು. ಒಟ್ಟು 75 ರೈತ ಉತ್ಪಾದಕರ ಕಂಪೆನಿ ಸದಸ್ಯರು ಮೂರು ಕಾರ್ಯಕ್ರಮಗಳಿಂದ ಪ್ರಯೋಜನ ಪಡೆದರು ಮತ್ತು 36 ಆಯ್ದ ರೈತರಿಗೆ ಪರಿಕರಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ರೈತ ಉತ್ಪಾದಕರ ಕಂಪೆನಿಯ ನಿರ್ದೇಶಕರಾದ ಶ್ರೀ. ಕೃಷ್ಣಮೂರ್ತಿ, ಮುಖ್ಯ ಕಾರ್ಯನಿರ್ವಹಕ ಅಧಿಕಾರಿ ಶ್ರೀ. ಪ್ರದೀಪ್, ಮತ್ತು ಸಿಬ್ಬಂದಿ ಶ್ರೀ. ಜನಾರ್ಧನ್ ಉಪಸ್ಥಿತರಿದ್ದರು.








## ಆಕಾಶವಾಣಿ ಬಾನುಲಿ ಕಾರ್ಯಕ್ರಮ

ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ದಿನಾಂಕ 14–12–2022ರಂದು ಆಕಾಶವಾಣಿ, ಮಂಗಳೂರು ಬಾನುಲಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಉಡುಪಿ ಮಲ್ಲಿಗೆಯ ಪ್ರಾಮುಖ್ಯತೆ, ಅದರ ಬೇಸಾಯ ಕ್ರಮಗಳು, ಸವುರುವಿಕೆ ಮಾಡುವ ಸಮಯದ ಕುರಿತು ಮಾಹಿತಿಯನ್ನು ನೀಡಿದರು.



## ಪರಿಶಿಷ್ಟ ಜಾತಿ ಉಪಯೋಜನೆ-2023

ಭಾರತೀಯ ಕೃಷಿ ಅನುಸಂಧಾನ ಪರಿಷತ್–ಕೃಷಿ ತಂತ್ರಜ್ಞಾನ ಅಳವಡಿಕೆ ಸಂಸ್ಥೆ, ಬೆಂಗಳೂರು, ರವರ ನಿರ್ದೇಶನದಂತೆ ಪರಿಶಿಷ್ಟ ಜಾತಿ ಉಪಯೋಜನೆ–2023ರ ಅನುಷ್ಠಾನಕ್ಕಾಗಿ ಕ್ರಿಯಾಯೋಜನೆ ತಯಾರಿಸಲು ದಿನಾಂಕ: 16.12.2022 ರಂದು ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲೂಕಿನ ಪುದುವೆಟ್ಟು ಗ್ರಾಮದಲ್ಲಿ ಪರಿಶಿಷ್ಟ ಜಾತಿಗೆ ಸೇರಿದರೈತರ ಮಾಹಿತಿಯನ್ನು ಕ್ರೋಢಿಕರಿಸಲು ಸರ್ವೆಕಾರ್ಯವನ್ನು ಭಾರತಿಯ ಕೃಷಿ ಅನುಸಂಧಾನ ಪರಿಷತ್ ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣಕನ್ನಡ ಇವರ ವತಿಯಿಂದ ಕೈಗೊಳ್ಳಲಾಯಿತು.ಈ ಕಾರ್ಯಕ್ರಮದ ಮುಖ್ಯ ಧ್ಯೇಯೊದ್ಧೇಶ ಪರಿಶಿಷ್ಟ ಜಾತಿಗೆ ಸೇರಿದ ರೈತರ ಮತ್ತು ಜಮೀನು ರಹಿತ ಕುಟುಂಬಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಕೃಷಿ ವಿಜ್ಞಾನ ಕೇಂದ್ರದ ಮೂಲಕ ಕೃಷಿ, ಪಶುಸಂಗೋಪನೆ, ಕೋಳಿ ಸಾಕಾಣಿಕೆ ಮತ್ತು ಮೀನುಗಾರಿಕೆಯಲ್ಲಿ ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸುವುದು. ಡಾ. ಶಿವಕುಮಾರ್, ಆರ್., ಸಹಾಯಕ ಪ್ರಾಧ್ಯಾಪಕರು, ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು ಇವರು ಪರಿಶಿಷ್ಟ ಜಾತಿ ಉಪಯೋಜನೆ ಕಾರ್ಯಕ್ರಮದ ಸಂಯೋಜಕರಾಗಿದ್ದು, ಈ ಸರ್ವೆಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಎಲ್ಲಾ ವಿಜ್ಞಾನಿಗಳು ಮತ್ತು ಸಿಬ್ಬಂದಿಗಳು ಹಾಜರಿದ್ದರು.






## ಜಲಾನಯನ ಚಟುವಟಿಕೆಗಳ ನಿರ್ವಹಣೆ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮ



ಭಾ.ಕೃ.ಅ.ಪ. ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ, ಜಲಾನಯನ ಯೋಜನೆ ಅಡಿಯಲ್ಲಿ ಪ್ರವಾಸ ಕೈಗೊಂಡ ಬೇಲೂರು ತಾಲೂಕಿನ ರೈತ ಮತ್ತು ರೈತ ಮಹಿಳೆಯರಿಗೆ ಒಂದು ದಿನದ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ದಿನಾಂಕ 21.12.2022 ರಂದು ಹಮ್ಮಿಕೊಳ್ಳಲಾಯಿತು. ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿ ಡಾ. ಮಲ್ಲಿಕಾರ್ಜುನ ಎಲ್. ಮಾತನಾಡಿ, ಜಲಾನಯನ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದರಿಂದ ಭೂಮಿಯ ಅಂತರ್ಜಲದ ಮಟ್ಟ, ಸಸ್ಯ ಸಂಪನ್ಮೂಲ, ಮಣ್ಣಿನ ಫಲವತ್ತತೆ ಹಾಗೂ ಪರಿಸರದ ಸಮತೋಲನದ ಮೇಲೆ ಆಗುವ ಪ್ರಯೋಜನಗಳ ಕುರಿತು ತಿಳಿಸಿದರು. ವಿಜ್ಞಾನಿಗಳಾದ  ಡಾ. ಶಿವಕುಮಾರ ಆರ್., ಡಾ. ಕೇದಾರನಾಥ, 49 ರೈತರು ಹಾಗೂ ರೈತ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಜೀವನೋಪಾಯ ಸುಧಾರಣೆಗಾಗಿ ಮೀನಿನ ಮೌಲ್ಯವರ್ಧನೆ ಕುರಿತು ಬುಡಕಟ್ಟು ಮಹಿಳೆಯರಿಗೆ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮ

ಮೀನು ಪ್ರಪಂಚದ ಆರೋಗ್ಯಕರ ಆಹಾರಗಳಲ್ಲಿ ಒಂದಾಗಿದೆ. ಕಡಿಮೆ ಕೊಬ್ಬನ್ನು ಹೊಂದಿರುವ, ಪೋಷಕಾಂಶಗಳಲ್ಲಿ ಸಮೃದ್ಧವಾಗಿದೆ, ಒಮೆಗಾ–3 ಕೊಬ್ಬಿನಾಮ್ಲಗಳು, ಜೀವಸತ್ವಗಳು ಮತ್ತು ಖನಿಜಗಳ ಉತ್ತಮ ಮೂಲದಿಂದ ತುಂಬಿರುತ್ತದೆ. ಭಾರತದಲ್ಲಿ ಮೀನುಗಾರಿಕೆ ಕ್ಷೇತ್ರವು 14.5 ಮಿಲಿಯನ್ ಜನರಿಗೆ ಉದ್ಯೋಗ ನೀಡುವ ಪ್ರಮುಖ ಉದ್ಯಮವಾಗಿದೆ. ಭಾರತವು ವಿಶ್ವದ ಒಳನಾಡಿನ ಮೀನುಗಾರಿಕೆಯಲ್ಲಿ ಎರಡನೇ ಸ್ಥಾನದಲ್ಲಿದೆ ಮತ್ತು ಒಟ್ಟು ಮೀನುಗಾರಿಕೆ ಉತ್ಪಾದನೆಯಲ್ಲಿ ಮೂರನೇ ಸ್ಥಾನದಲ್ಲಿದೆ. ಭಾರತದ ಒಟ್ಟು 1.07% ಜಿಡಿಪಿಗೆ ಮೀನುಗಾರಿಕೆ ಕೊಡುಗೆ ನೀಡುತ್ತದೆ. ಮೀನು ಹೆಚ್ಚು ಹಾಳಾಗುವ ಆಹಾರವಾಗಿದೆ ಮತ್ತು ಅದರ ಜೀವಿತಾವಧಿಯನ್ನು ಹೆಚ್ಚಿಸಲು ಮತ್ತು ಅದರ ಗುಣಮಟ್ಟ ಮತ್ತು ಪೌಷ್ಟಿಕಾಂಶದ ಗುಣಲಕ್ಷಣಗಳನ್ನು ಉಳಿಸಿಕೊಳ್ಳಲು ಸರಿಯಾದ ನಿರ್ವಹಣೆ ಮತ್ತು ಸಂರಕ್ಷಣೆ ಅಗತ್ಯವಿರುತ್ತದೆ. ಆದ್ದರಿಂದ, ಮೀನುಗಳನ್ನು ಸಂರಕ್ಷಿಸಲು ಘನೀಕರಿಸುವಿಕೆ, ಕ್ಯಾನಿಂಗ್, ಮಂಜುಗಡೆ ಬಳಸುವುದು ಹೊಗೆಯಾಡಿಸುವುದು ಮತ್ತು ಒಣಗಿಸುವ ವಿಧಾನಗಳಂತಹ ವಿಭಿನ್ನ ವಿಧಾನಗಳನ್ನು ಬಳಸಲಾಗುತ್ತದೆ. ಸ್ಥಳೀಯ ಮೀನುಗಾರರು ಒಣ ಮೀನು ಉತ್ಪಾದಿಸಲು ಸಾಂಪ್ರದಾಯಿಕ ಪದ್ಧತಿಯನ್ನು ಅಳವಡಿಸುತ್ತಾರೆ. ಅಲ್ಲಿ ಅವರು ತೆಂಗಿನ ನಾರಿನಿಂದ ಮಾಡಿದ ಚಾಪೆ ಮತ್ತು ಕಡಲ ತೀರಗಳಲ್ಲಿ ಪ್ಲಾಸ್ಟಿಕ್ ಶೀಟ್ ಅನ್ನು ಬಳಸುತ್ತಾರೆ, ಈ ವಿಧಾನವು ಕಡಿಮೆ ವೆಚ್ಚದಾಯಕವಾಗಿದೆ ಆದರೆ ಒಣಗಿದ ಮೀನಿನ ಉತ್ಪನ್ನವು ಕಡಿಮೆ ಗುಣಮಟ್ಟದ್ದಾಗಿದೆ ಮತ್ತು ಗ್ರಾಹಕರು ಖರೀದಿಸಲು ಕಡಿಮೆ ಆಸಕ್ತಿಯನ್ನು ತೋರಿಸುತ್ತಾರೆ.

ಉತ್ತಮ ಗುಣಮಟ್ಟದ ಆರೋಗ್ಯಕರ ಒಣಗಿದ ಮೀನುಗಳನ್ನು ಉತ್ಪಾದಿಸಲು, (ವಿಶ್ವ ಮೀನು) ಸಂಶೋಧನಾ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಭಾ.ಕೃ.ಅ.ಪ –ಕೇಂದ್ರೀಯ ಮೀನುಗಾರಿಕಾ ತಂತ್ರಜ್ಞಾನಗಳ ಸಂಸ್ಥೆ, ಕೊಚ್ಚಿ ಸಂಶೋಧನಾ ಸಹಯೋಗದ ಅಡಿಯಲ್ಲಿ ಸೌರಡ್ರೈಯರ್‌ಅನ್ನು  ಒದಗಿಸಲಾಗಿದೆ (ಮೌಲ್ಯ ಸರಪಳಿ ಮತ್ತು ಪೌಷ್ಟಿಕಾಂಶದ ಸಂಶೋಧನಾ ಫಲಿತಾಂಶಗಳು: ಮಹಿಳೆಯರು ಮತ್ತು ಮಕ್ಕಳ ಪೌಷ್ಟಿಕಾಂಶ ಮತ್ತು ಆರೋಗ್ಯಕ್ಕಾಗಿ ಮೀನು). ಅದರಂತೆ, ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಭಾರತೀಯ ವಿಕಾಸ ಟ್ರಸ್ಟ್, ಮಣಿಪಾಲ ಸಹಯೋಗದಲ್ಲಿ ಮೀನುಗಾರರು ಸೇರಿದಂತೆ ವಿವಿಧ ಪಾಲುದಾರರನ್ನು ಒಳಗೊಂಡು ಒಣಮೀನಿನ ಆರೋಗ್ಯಕರ ಉತ್ಪಾದನೆಯ ಕುರಿತು ಸಾಮರ್ಥ್ಯ ಅಭಿವೃದ್ಧಿ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳನ್ನು ನಡೆಸಿತು. ಕಾರ್ಯಕ್ರಮದ ಅಂಗವಾಗಿ ಸ್ಥಳೀಯವಾಗಿ ದೊರೆಯುವ ಕಡಿಮೆ ಬೆಲೆಯ ಮೀನುಗಳಾದ ಬಂಗುಡೆ ಮೀನು ಮತ್ತು ನಂಗ್ ಮೀನನ್ನು ಬಳಸಿಕೊಂಡು ಆರೋಗ್ಯಕರವಾಗಿ ಒಣಗಿದ ಮೀನುಗಳನ್ನು ತಯಾರಿಸುವ ಕುರಿತು ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗಿತ್ತು. 75ನೇ ಆಜಾದಿ ಕಾ ಅಮೃತ ಮಹೋತ್ಸವದ ನಿಮಿತ್ತ ನಿಡ್ಪಳ್ಳಿ ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಕಡಿಮೆ ಬೆಲೆಯ ಮೀನಿನಿಂದ ಮೌಲ್ಯವರ್ಧಿತ ಉತ್ಪನ್ನ (ಮೀನಿನ ಚಟ್ನಿ ಪುಡಿ) ತಯಾರಿಸುವ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ನಿಡ್ಪಳ್ಳಿ ಗ್ರಾಮದಲ್ಲಿ ಒಂದು ಜಿಲ್ಲೆ ಒಂದು ಉತ್ಪನ್ನ  ಅಡಿಯಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮೀನಿನ ಚಟ್ನಿ ಪುಡಿ ತಯಾರಿಸುವ ಬಗ್ಗೆ ಪ್ರಾತ್ಯಕ್ಷಿಕೆ ನಡೆಸಲಾಯಿತು. ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟದ ವ್ಯವಹಾರದಲ್ಲಿ ಈಗಾಗಲೇ ತೊಡಗಿಸಿ ಕೊಂಡಿರುವ ಇಬ್ಬರು ಮಹಿಳಾ ಉದ್ಯಮಿಗಳು ತಮ್ಮ ಸಾಂಪ್ರದಾಯಿಕ ಮೀನಿನ ಚಟ್ನಿ ತಯಾರಿಕೆಯ ವಿಧಾನವನ್ನು ಹಂಚಿಕೊಂಡರು ಮತ್ತು ಸಮುದಾಯದ ಮುಖೇನ ಉದ್ಯಮಶೀಲತೆ ಕೌಶಲ್ಯವನ್ನು ಹೊಂದಲು ಇತರೆ ಮಹಿಳೆಯರನ್ನು ಪ್ರೇರೇಪಿಸಿದರು.

ಈ ಕಾರ್ಯಕ್ರಮದಿಂದ ಪ್ರೇರಿತರಾದ ಕೀರ್ತಿ ಸ್ತ್ರೀಶಕ್ತಿ ಗುಂಪಿನ ಮುಖ್ಯಸ್ಥರಾದ ಶ್ರೀಮತಿ ಅನಿತಾ ಅವರು ಆರಂಭದಲ್ಲಿ 25 ಬುಡಕಟ್ಟು ಮಹಿಳೆಯರನ್ನು ಒಳಗೊಂಡು ಸಣ್ಣ ಪ್ರಮಾಣದಲ್ಲಿ ಈ ವ್ಯವಹಾರವನ್ನು ಪ್ರಾರಂಭಿಸಿದರು ಮತ್ತು ನಂತರ ದಕ್ಷಿಣ ಕನ್ನಡದ ಕೃಷಿ ವಿಜ್ಞಾನ ಕೇಂದ್ರದ ತಾಂತ್ರಿಕ ಮಾರ್ಗದರ್ಶನದಲ್ಲಿ ಜಿಲ್ಲೆಯ ಇತರೆ ಗುಂಪುಗಳಿಗೆ ವಿಸ್ತರಿಸಿದರು.






**ಅತ್ಯುತ್ತಮ ಕೆ.ವಿ.ಕೆ ವಿಜ್ಞಾನಿ ಪ್ರಶಸ್ತಿ**- ಕೃಷಿ ವಿಜ್ಞಾನ ಕೇಂದ್ರದ ಮೀನುಗಾರಿಕಾ ವಿಜ್ಞಾನಿಯಾದ, ಡಾ. ಚೇತನ್‌ಎನ್. ರವರು ಜಲ ಪರಿಸರ ನಿರ್ವಹಣೆ ಕ್ಷೇತ್ರದಲ್ಲಿ ಅತ್ಯುತ್ತಮ ಕೊಡುಗೆಯಾಗಿ, ಗೋವಾದಲ್ಲಿ ನಡೆದ ಜಾಗತಿಕ ಅಭಿವೃದ್ಧಿಗಾಗಿ ಕೃಷಿ, ಪರಿಸರ ಮತ್ತು ಜೈವಿಕ ವಿಜ್ಞಾನಗಳಲ್ಲಿನ ಅವಕಾಶಗಳು ಮತ್ತು ಸವಾಲುಗಳು ಎಂಬ 7ನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ (29–31, ಅಕ್ಟೋಬರ್, 2022) ಅತ್ಯುತ್ತಮ ಕೆ ವಿ ಕೆ ವಿಜ್ಞಾನಿ  ಪ್ರಶಸ್ತಿಯೊಂದಿಗೆ ಸಮ್ಮಾನಿಸಲಾಗಿದೆ.



C. No : AEDS/OCAEBGD/082/2022

Certificate

The Executive/Organizing Committee of the conference confers it

Best KVK Scientist Award

To

Dr. Chethan N

Scientist, ICAR-KVK, Dakshina Kannada, Karnataka

For outstanding contribution in the field of

(Aquatic Environment Management)

On the occasion of 7th International Conference On

"Opportunities and Challenges in Agriculture, Environmental & Biosciences for Global Development (OCAEBGD-2022)"

Organized by

Don Bosco College of Agriculture, Sulcorna, Quepem, Goa, Affiliated to Goa University, Goa

Agro Environmental Development Society (AEDS) Majhra Ghat, Rampur, U.P., India

College of Horticulture and Forestry, Central Agricultural University Pasighat-Arunachal Pradesh, India

School of Environment and Sustainable Development, Central University of Gujarat Gandhinagar, India

Held on October 29-31, 2022

at Conference Hall, St. Joseph Vaz Spiritual Renewal Centre Cruz Dos Milagres, Old Goa, Goa

| Dr. Suresh Kunklikar | Dr. Chhatarpal Singh | Dr. Gourish Karanjalker | Md. Nadeem Akhtar |
|---|---|---|---|
| Organizing Chairman | Organizing Secretary | Convener | Executive Coordinator |
| (OCAEBGD-2022) | (OCAEBGD-2022) | (OCAEBGD-2022) | (OCAEBGD-2022) |



Best KVK Scientist Award

Presented to

Dr. Chethan N

Scientist, ICAR-KVK, Dakshina Kannada
Karnataka

For outstanding contribution in the field of

(Aquatic Environment Management)

On the occasion of 7th International Conference
on

"Opportunities and Challenges in Agriculture
Environmental & Biosciences for Global Development"
(OCAEBGD-2022)

Organized by

Don Bosco College of Agriculture, Sulcorna, Quepem, Goa.
Affiliated to Goa University, Goa
College of Horticulture and Forestry, Central Agricultural University
Pasighat-Arunachal Pradesh
Agro Environmental Development Society (AEDS) Majhra Ghat
Rampur, Uttar Pradesh, India
School of Environment and Sustainable Development, Central University of Gujarat
Gandhinagar, India

## ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮ

Certificate No.316 - PHE(PAT&SM-5)/22-23

सत्यमेव जयते

**NATIONAL INSTITUTE OF PLANT HEALTH MANAGEMENT**
Rajendranagar, Hyderabad - 500 030 (India)
Department of Agriculture & Farmers Welfare
Ministry of Agriculture & Farmers Welfare
Government of India

रा व स्वा प्र सं
NIPHM

### CERTIFICATE

This is to certify that Dr./Mr./Smt./Ms. **Kedarnath, Scientist Plant Protection And Entomolgy, ICAR-Krishi Vigyan Kendra (Dakshina Kannada) Kankanady Mangaluru, Karnataka** has successfully completed 5-days online training on **"Pesticide Application Techniques and Safety Measures"** organized by National Institute of Plant Health Management, Hyderabad from **31st October to 04th November 2022.**

**Dr. Vidhu Kampurath P**
**Joint Director (Plant Health Engineering)**

**Dr. Sagar Hanuman Singh**
**Director General**

PHE PAT&SM 3110 0411 2022 0019





| | | |
|---|---|---|
| ಸಂಪಾದಕರು | : | ಡಾ. ಟಿ. ಜೆ. ರಮೇಶ |
| ಸಹ ಸಂಪಾದಕರು | : | ಡಾ. ರಶ್ಮಿ ಆರ್. |
| ಸಹಾಯಕ ಸಂಪಾದಕರು | : | ಡಾ. ಶಿವಕುಮಾರ್ ಆರ್.<br>ಡಾ. ಚೇತನ್ ಎನ್<br>ಡಾ. ಕೇದಾರನಾಥ<br>ಡಾ. ನವೀನ್ ಕುಮಾರ್ ಬಿ. ಟಿ.<br>ಡಾ. ಮಲ್ಲಿಕಾರ್ಜುನ ಎಲ್. |
| ಸಲಹೆ ಮತ್ತು ಮಾರ್ಗದರ್ಶನ | : | ಡಾ. ಎನ್. ಎ. ಪಾಟೀಲ್ |
| ಪುಟ ವಿನ್ಯಾಸ | : | ಶ್ರೀ ಸತೀಶ ನಾಯ್ಕ ಕೆ. |
| ಪ್ರಕಾಶಕರು | : | ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು<br>ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ,<br>ಮಂಗಳೂರು – 576102 |

ಭಾ.ಕೃ.ಅ.ಪ.–ಕೆ.ವಿ.ಕೆ.ದ.ಕ., ಮಂಗಳೂರು ದೂ.ಸಂಖ್ಯೆ : 0824–2431872,
ಮಿಂಚಂಚೆ : kvk.DakshinaKannada@icar.gov.in ವೆಬ್‌ಸೈಟ್:kvkdk.org

हर कदम, हर डगर
किसानों का हमसफर
भारतीय कृषि अनुसंधान परिषद
Agrisearch with a human touch